INDIAN JOURNAL OF
MULTILINGUAL RESEARCH AND DEVELOPMENT

DOI: 10.34256/ijmrd2137

# A Scientific study of Forests of the Western Ghats

## ಪಶ್ಚಿಮ ಘಟ್ಟಗಳ ಕಾಡುಗಳ ವೈಜ್ಞಾನಿಕ ಅಧ್ಯಯನ

**T.M. Geethanjali** [a,]

[a] Department of Kannada, Karnataka State Open University, Mukhtagangotri, Mysuru-560007, Karnataka, India
*Corresponding author Email: tm.geethanjali@gmail.com
DOI: https://doi.org/10.34256/ijmrd2137
Received: 09-07-2021; Revised: 15-08-2021; Accepted: 17-08-2021; Published: 18-08-2021

**Abstract:** The Western Ghats in India's Deccan Plateau has been recognized as one of the eight "hottest hot-spots" of biological diversity in the world. UNESCO has identified this region as a World Heritage Site. In Maharashtra, this mountain range is known as 'Sahyadri', 'Dang forests' in Gujarat, 'Nilgiris' in Tamil Nadu and Kerala, and 'Malnad' in Karnataka. It stretches across the six Indian states of Gujrat, Maharashtra, Goa, Tamil Nadu, Kerala, Karnataka and two union territories including Daman and Diu and Pondicherry. These hills begin near the border of Gujarat and Maharashtra, south of the Tapti river, and end at Kanyakumari, at the southern tip of India, covering an incredible 1,60,000 sq.km. In the 18th and 19th centuries, most of the people who classified the flora of these regions are hobbyists. Very few British Officers who conduct survey of this landscape release their books. A complete scientific study of this biodiversity hot-spot is yet to be undertaken. Until now, only a handful of scientists have undertaken a study of the Western Ghats. So, this present article expains a brief scientific study of the forests of the Western Ghats.

**Keywords:** Western Ghats, UNESCO, Forest, Deccan Plateau

**Subject Specialization:** **Kannada**

## ಪರಿಚಯ

ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ,

ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ,

ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ,

ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆ ಕಳೆ ಕಳೆವಳೋ,

ಅಲ್ಲಿ ಆ ಕಡೆ ನೋಡಲಾ!

ಅಲ್ಲಿ ಕೊಡವರ ನಾಡಲಾ!

ಅಲ್ಲಿ ಕೊಡವರ ಬೀಡಲಾ!

-'ಹುತ್ತರಿ ಹಾಡು': ಪಂಜೆ ಮಂಗೇಶರಾಯರು (ಪಂಜೆ ರಾಮರಾಯರು)

ಪಶ್ಚಿಮ ಘಟ್ಟದ ಪರ್ವತಗಳು, ದಕ್ಷಿಣ ಭಾರತದ ಪಶ್ಚಿಮ ಸಮುದ್ರ ತೀರದ (ಅರಬ್ಬಿ ಸಮುದ್ರ ತೀರದ) ಉದ್ದಕ್ಕೂ ಹಬ್ಬಿರುವ ಪರ್ವತ ಶ್ರೇಣಿಯಾಗಿದೆ. ದಕ್ಷಿಣ ಭಾರತದ ಪೂರ್ವ ಭಾಗದಲ್ಲೂ (ಬಂಗಾಳಕೊಲ್ಲಿ ಸಮುದ್ರುದುದ್ದಕ್ಕೂ) ಕೂಡ ಇದು ಹಬ್ಬಿದೆ. ಅಲ್ಲಿ ಇದನ್ನು 'ಪೂರ್ವ ಘಟ್ಟಗಳು' ಎಂದು ಕರೆಯುತ್ತಾರೆ. ಪಶ್ಚಿಮ ಘಟ್ಟಗಳು ಮತ್ತು ಪೂರ್ವ ಘಟ್ಟಗಳು ನೀಲಗಿರಿಯಲ್ಲಿ ಒಂದನ್ನೊಂದು ಸಂಧಿಸುತ್ತವೆ. ಮೈಸೂರಿನ ದಕ್ಷಿಣ ಪೂರ್ವಕ್ಕಿರುವ ಬಿಳಿರಂಗನ ಬೆಟ್ಟದಲ್ಲಿ ಈ ನೀಲಗಿರಿ ಕೂಡುತ್ತದೆ. ದಕ್ಷಿಣ ಪ್ರಸ್ಥ ಭೂಮಿಯ Deccan Plateau ಅಂಚಿನಲ್ಲಿ ಉತ್ತರದಿಂದ ದಕ್ಷಿಣ ಭಾಗದವರೆಗೂ ಉದ್ದಕ್ಕೂ

ಹರಡಿರುವ ಈ ಪರ್ವತದ ಶ್ರೇಣಿಗಳನ್ನು ಕೆಲವೊಮ್ಮೆ "ಭಾರತದ ಮಹಾನ್ ಬೆಟ್ಟದ ಇಳಿಜಾರು" (Un designates Western Ghats as world heritage site, 2012) (Great Escarpment of India") ಎಂದೂ ಕರೆಯುವುದುಂಟು. ಘಟ್ಟದ ಅಂಚಿನಲ್ಲಿರುವ ಸಮುದ್ರ ತೀರದ ಸಮತಟ್ಟಾದ ಪ್ರದೇಶದ ಭೂಭಾಗವನ್ನು (ಈ ಸಮತಟ್ಟಾದ ಸಮುದ್ರ ತೀರದ ಭೂಭಾಗವನ್ನು 'ಕೊಂಕಣ ಮಾರ್ಗ' ಎಂದೂ, ಆ ಸಮಗ್ರ ಪ್ರದೇಶವನ್ನು 'ಕೆನರ' ಎಂದೂ ಮತ್ತು ಸಮುದ್ರ ತೀರದ ದಕ್ಷಿಣಭಾಗವನ್ನು 'ಮಲಬಾರ್' ಅಥವಾ 'ಮಲಬರ್ ತೀರ ಪ್ರದೇಶ'ವೆಂದು ಕರೆಯುತ್ತಾರೆ.) ಪಶ್ಚಿಮ ಘಟ್ಟದ ಪರ್ವತಗಳು ಬೇರ್ಪಡಿಸಿದೆ. ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಈ ಕಾಡುಗಳನ್ನು 'ಸಹ್ಯಾದ್ರಿ' ಎಂದೂ, ಗುಜರಾತಿನಲ್ಲಿ ಇದನ್ನು 'ದಾಂಗ್ ಕಾಡು' ಎಂದೂ, ತಮಿಳುನಾಡಿನಲ್ಲಿ 'ನೀಲಗಿರಿ ಮಲೈ' ಎಂದೂ, ಕರ್ನಾಟಕದ ಮದ್ಯಭಾಗದ ಈ ಬೆಟ್ಟಗಳನ್ನು 'ಮಲೆನಾಡು' ಎಂದೂ, ಕೇರಳದಲ್ಲಿ 'ಸಹ್ಯ ಪರ್ವತಂ', ಮಹಾರಾಷ್ಟ್ರದ ಪೂರ್ವ ಭಾಗದ ಘಟ್ಟಗಳನ್ನು'ದೇಶ್' ಎಂದೂ ಕರೆಯುತ್ತಾರೆ. ಗುಜರಾತ್, ಮಹಾರಷ್ಟ್ರ, ಗೋವ, ತಮಿಳುನಾಡು, ಕರ್ನಾಟಕ, ಕೇರಳ ಹೀಗೆ ಒಟ್ಟು ಆರು ರಾಜ್ಯಾಡಳಿತ ಪ್ರದೇಶ ಮತ್ತು ಎರಡು ಕೇಂದ್ರಾಡಳಿತ ಪ್ರದೇಶವಾದ ದಾದ್ರ-ಹವೇಲಿ ಮತ್ತು ಪಾಂಡಿಚೆರಿಗಳಲ್ಲಿ ಇದು ಹರಡಿಕೊಂಡಿದೆ.

ಗುಜರಾತ್ ಮತ್ತು ಮಹಾರಾಷ್ಟ್ರದ ಗಡಿಯಲ್ಲಿರುವ ತಪತಿ ನದಿತೀರದ ದಕ್ಷಿಣದಲ್ಲಿ ಹುಟ್ಟುವ ಪಶ್ಚಿಮ ಘಟ್ಟದ ಸಾಲುಗಳು (ಅಲ್ಲಿ ಈ ಬೆಟ್ಟಗಳನ್ನು 'ಸಾತ್ಪುರ ಪರ್ವತ ಶ್ರೇಣಿಗಳು" ಎಂದು ಕರೆಯುತ್ತಾರೆ.) ಗೋವಾದ ದಕ್ಷಿಣ ಭಾಗದಿಂದ ಹಾದು, ಕರ್ನಾಟಕ, ಕೇರಳದಿಂದ ತಮಿಳುನಾಡಿಗೆ ಪ್ರವೇಶಿಸಿ ದಕ್ಷಿಣ ಭಾರತದ ತುದಿಯಾದ ಕನ್ಯಾಕುಮಾರಿಯಲ್ಲಿ ಕೊನೆಗೊಳ್ಳುತ್ತವೆ. 60,000ಕಿ.ಮೀ. ವಿಸ್ತೀರ್ಣದಲ್ಲಿ ಹಬ್ಬಿಕೊಂಡಿರುವ ಈ ಪರ್ವತ ಶ್ರೇಣಿಗಳ ಸರಾಸರಿ ಎತ್ತರ 1,200ಮೀಟರ್ (3,900 ಅಡಿಗಳು) ಆಗಿರುತ್ತದೆ (The Peninsula, 2007). ಈ ಪಶ್ಚಿಮ ಘಟ್ಟದ ಪರ್ವ ತಗಳು ಭಾರತದ ದಕ್ಷಿಣ-ಪಶ್ಚಿಮಾಭಿಮುಖವಾಗಿ ಬೀಸುವ ಮುಂಗಾರು ಮಾರುತಗಳನ್ನು ದಕ್ಕನ್ ಪ್ರಸ್ಥ ಭೂಮಿಗೆ ಹೋಗದಂತೆ ತಡೆಹಿಡಿಯುತ್ತವೆ (Vijayan, 2007). ಭಾರತದ ಹಲವು ಜಟಿಲ ನದಿಗಳ ತವರುಮನೆಯಾಗಿರುವ ಈ ಪರ್ವತಗಳು ಭಾರತೀಯರ ಶೇ. 40% ಭಾಗ ನೀರಿನ ಅವಶ್ಯಕತೆಯನ್ನು ಪೂರೈಸುತ್ತವೆ.

ಹೀಗೆ ದಕ್ಷಿಣ ಭಾರತದ ದಕ್ಷಿಣ ಪ್ರಸ್ಥಭೂಮಿಯ ಎರಡೂ ಬದಿಗಳಲ್ಲಿ ಹಬ್ಬಿ ಕೊಂಡಿರುವ ಪಶ್ಚಿಮ ಘಟ್ಟದ ಪರ್ವತಗಳು ಜಗತ್ತಿನ ಎಂಟು ಅತ್ಯಂತ ಪ್ರಮುಖ ಜೈವಿಕ ವೈವಿದ್ಯತೆಯ ತಾಣಗಳಲ್ಲಿ ಒಂದಾಗಿದೆ (Myers, et al, 2000). (One of the eight "hottest hot-spots" of biological diversity in the world") ಯುನೆಸ್ಕೊ ಪಶ್ಚಿಮ ಘಟ್ಟದ ಕಾಡುಗಳನ್ನು ಸಂರಕ್ಷಿತ ತಾಣ ((UNESCO World Heritage Site) (Un designates Western Ghats as world heritage site, 2012) ವೆಂದೂ ಘೋಷಿಸಿದೆ. ಭಾರತ 2006ರಲ್ಲಿ ಯುನೆಸ್ಕೋಗೆ 'ಸಂರಕ್ಷಿತ ತಾಣ' (UNESCO MAB) ವೆಂದು ಘೋಷಿಸಲು ಹೆಸರನ್ನು ನೊಂದಾಯಿಸಿತು. 2012ರಲ್ಲಿ ಈ ಕೆಳಗಿನ ಪ್ರದೇಶಗಳು ಸಂರಕ್ಷಿತ ಪ್ರದೇಶವೆಂದು ಘೋಷಿಸಲ್ಪಟ್ಟವು:

1. ಕಾಲಕ್ಕಾಡ್ ಮುಂಡಾಂತರ್ರೈ ಹುಲಿಗಳ ಸಂರಕ್ಷಣಾ ತಾಣ
2. ಷೆಂಡುರ್ನೆ ವನ್ಯಜೀವಿಗಳ ಅಭಯಾರಣ್ಯ
3. ನೆಯ್ಯಾರ್ ವನ್ಯಜೀವಿಗಳ ಅಭಯಾರಣ್ಯ
4. ಪೆಪ್ಪಾರ ವನ್ಯಜೀವಿಗಳ ಅಭಯಾರಣ್ಯ
5. ಪೆರಿಯಾರ್ ಹುಲಿಗಳ ಸಂರಕ್ಷಣಾ ತಾಣ
6. ಶ್ರೀ ವಳ್ಳಿ ಪುತ್ತೂರ್ ವನ್ಯಜೀವಿಗಳ ಅಭಯಾರಣ್ಯ
7. ಎರ್ವಕುಲಮ್ ರಾಷ್ಟ್ರೀಯ ವನ್ಯಧಾಮ
8. ಗ್ರಾಸ್ ಹಿಲ್ಸ್ ರಾಷ್ಟ್ರೀಯ ವನ್ಯದಾಮ
9. ಕರಿಯನ್ ಶೂಲ ರಾಷ್ಟ್ರೀಯ ವನ್ಯಧಾಮ
10. ಸತ್ಯ ಮಂಗಲಮ್ ವನ್ಯಜೀವಿಗಳ ಅಭಯಾರಣ್ಯ
11. ಚಿನ್ನೂರ್ ವನ್ಯಜೀವಿಗಳ ಅಭಯಾರಣ್ಯ
12. ಸೈಲೆಂಟ್ ವ್ಯಾಲಿ ರಾಷ್ಟ್ರೀಯ ವನ್ಯಧಾಮ
13. ಸತ್ಯ ಮಂಗಲಮ್ ವನ್ಯಜೀವಿಗಳ ಅಭಯಾರಣ್ಯ
14. ಮುಕೃತಿ ರಾಷ್ಟ್ರೀಯ ವನ್ಯಧಾಮ
15. ಪುಷ್ಪಗಿರಿ ವನ್ಯಜೀವಿಗಳ ಅಭಯಾರಣ್ಯ
16. ಬ್ರಹ್ಮಗಿರಿ ವನ್ಯಜೀವಿಗಳ ಅಭಯಾರಣ್ಯ
17. ತಲಕಾವೇರಿ ವನ್ಯಜೀವಿಗಳ ಅಭಯಾರಣ್ಯ
18. ಅರಲಮ್ ವನ್ಯಜೀವಿಗಳ ಅಭಯಾರಣ್ಯ

19. ಕುದುರೆಮುಖ ರಾಷ್ಟ್ರೀಯ ವನ್ಯಧಾಮ
20. ಸೋಮೇಶ್ವರ ವನ್ಯಜೀವಿಗಳ ಅಭಯಾರಣ್ಯ
21. ಕಾಸ್ ಪ್ರಸ್ಥಭೂಮಿ
22. ಕೋಯ್ನ ವನ್ಯಜೀವಿಗಳ ಅಭಯಾರಣ್ಯ
23. ಚಂದೂಳಿ ರಾಷ್ಟ್ರೀಯ ವನ್ಯಧಾಮ
24. ರಾಧನಗಿರಿ ವನ್ಯಜೀವಿಗಳ ಅಭಯಾರಣ್ಯ

## 1. ಪಶ್ಚಿಮ ಘಟ್ಟದ ಕಾಡುಗಳ ಭೂವಿಜ್ಞಾನ

ಪಶ್ಚಿಮ ಘಟ್ಟದ ಪರ್ವತಗಳು ದಕ್ಕನ್ ಪ್ರಸ್ಥಭೂಮಿಯ ಅಂಚನ್ನು ತಪ್ಪು ತಪ್ಪಾಗಿ ಕೊರೆದು ಹಾಕಿರುವಂತೆ ಮೈತಳೆದು ನಿಂತಿವೆ. ಭೂ ವಿಜ್ಞಾನಿಗಳ ಪ್ರಕಾರ 150 ಮಿಲಿಯನ್ ವರ್ಷಗಳ ಹಿಂದೆ ಗೋಂಡ್ವಾನ ಭೂಖಂಡ ಏರ್ಪಡುವ ಸಮಯದಲ್ಲಿ ಈ ಪರ್ವತಗಳು ರೂಪುಗೊಂಡಿವೆ. ಈ ಪ್ರದೇಶದ ಭೂಲಕ್ಷಣಗಳು ತೋರ್ಪಡಿಸುವಂತೆ ಭಾರತದ ಪಶ್ಚಿಮ ಕರಾವಳಿಯ ನೂರರಿಂದ ಎಂಬತ್ತು ಮಿಲಿಯನ್ ವರ್ಷಗಳ ಹಿಂದೆ ಭಾರತವು ಮಡಗಾಸ್ಕರ್ ನಿಂದ ಬೇರ್ಪಟ್ಟ ನಂತರ ಭಾರತದ ಪಶ್ಚಿಮ ಕರಾವಳಿಯಲ್ಲಿ ಇದ್ದಕ್ಕಿದ್ದಂತೆ ದೊಡ್ಡ ದೊಡ್ಡ ಪ್ರಪಾತಗಳು ಕಂಡುಬಂದವು. 1,000ಮೀ. ನಿಂದ 3,300ಮೀ. ಅಡಿ ಆಳದ ಇಳಿಜಾರುಗಳು ಇವಾಗಿದ್ದವು. ಈ ಪರ್ವತಗಳಲ್ಲಿ ಪಾಚೀನ ಕಾಲದಿಂದಲೂ ನೆಲೆಗೊಂಡಂತಹ ಬಸಾಲ್ಟ್ ಕಲ್ಲುಗಳಿದ್ದವು. ಇಲ್ಲಿ ಕಂಡುಬರುವ ಇನ್ನಿತರ ಶಿಲೆಗಳೆಂದರೆ ಚಾರ್ನೋಕೈಟ್ಗಳು, ಗ್ರಾನೈಟ್ ನೈಸ್ ಗಳು, ಹೊಂಡಾಲಿಟೀಸ್ಗಳು, ಹೆಪ್ಪಿನಿಟಿಗಳು (khondalites, leptynites)) ಸ್ಪಟಿಕ ಸುಣ್ಣದ ಕಲ್ಲುಗಳಿಂದಾದ ರೂಪಾಂತರ ನೈಸ್ಗಲ್ಲುಗಳು, ಅಲ್ಯುಮಿನಿಯಮ್ ಅದಿರು, ಡಾಲರ್ ಕಲ್ಲುಗಳು, ಉಳಿದ ಲ್ಯಾಟರೈಟ್, ಕಬ್ಬಿಣದ ಅದಿರು.

## 2. ಪಶ್ಚಿಮ ಘಟ್ಟದ ಕಾಡುಗಳ ಲಕ್ಷಣಗಳು

ಪಶ್ಚಿಮ ಘಟ್ಟದ ಕಾಡುಗಳು ಉತ್ತರದಲ್ಲಿ ಗುಜರಾತಿನಿಂದ ಪ್ರಾರಂಭವಾಗಿ ತಮಿಳು ನಾಡಿನವರೆಗೂ ಹಬ್ಬಿವೆ. ಮದ್ಯದಲ್ಲಿ ಮಹಾರಾಷ್ಟ್ರ, ಗೋವಾ, ಕರ್ನಾಟಕ ಮತ್ತು ಕೇರಳವನ್ನು ಹಾದು ಹೋಗುತ್ತವೆ. ಗೋವಾದಲ್ಲಿ ಈ ಪರ್ವತಗಳ ಮದ್ಯದಲ್ಲಿ ದೊಡ್ಡ ಸಂಧಿಯಗಿದೆ. ಇದನ್ನು 'ಗೋವಾ ಗ್ಯಾಪ್' ಎಂದು ಕರೆಯುತ್ತಾರೆ. ಸಂಧಿ ಮಹಾರಾಷ್ಟ್ರ ಮತ್ತು ಕರ್ನಾಟಕವನ್ನು ಬೇರ್ಪಡಿಸಿದೆ. ಇನ್ನೊಂದು ದೊಡ್ಡ ಸಂಧಿಯೆಂದರೆ ಪಾಲಗಾಟ್ ನಲ್ಲಿ ದೆ. ಅದು ಕೇರಳ ಮತ್ತು ತಮಿಳುನಾಡುಗಳ ಗಡಿಭಾಗದಲ್ಲಿದೆ. ಈ ಸಂಧಿ ನೀಲಗಿರಿ ಪರ್ವತಗಳು ಮತ್ತು ಅಣ್ಣಾಮಲೈ ಪರ್ವತವನ್ನು ಬೇರ್ಪಡಿಸಿದೆ.

ಪಶ್ಚಿಮ ಘಟ್ಟದ ಪರ್ವತಗಳು ಭಾರತದ ಪಶ್ಚಿಮದಿಂದ ಬೀಸುವ ಮುಂಗಾರು ಮಾರುತಗಳನ್ನು ತಡೆಯುವುದರಿಂದ ಪಶ್ಚಿಮ ಘಟ್ಟದ ಪರ್ವತಗಳಲ್ಲಿ ಅತಿ ಹೆಚ್ಚು ಮಳೆ ಬೀಳುವ ಪ್ರದೇಶಗಳು ನೆಲೆಗೊಂಡಿವೆ. ಪಶ್ಚಿಮ ಘಟ್ಟದ ಪರ್ವತಗಳ ಪಶ್ಚಿಮ ಭಾಗಕ್ಕೆ ಎತೇಚ್ಚ ಮಳೆ ಬೀಳುತ್ತದೆ. ಈ ಪರ್ವತಗಳ ಮೇಲಿನ ದಟ್ಟ ಕಾಡುಗಳು ಆ ಜಾಗದ ತೇವಾಂಶ ಮಟ್ಟವನ್ನು ಹೆಚ್ಚಿಸುತ್ತವೆ ಮತ್ತು ಬಹುತೇಕ ಮಟ್ಟದ ತೇವಾಶವನ್ನು ಗಾಳಿಗೇ ಬಾಷ್ಪೀಕರಣದ ಮುಲಕ ಬಿಡುತ್ತದೆ. ಈ ತೇವಾಂಶದ ಗಾಳಿ ಸಮುದ್ರದ ಮೇಲೆ ಘನೀಭವಿಸುವ ಮೋಡಗಳನ್ನು ತಡೆದು ಅಲ್ಲಿಯೇ ಮತ್ತೆ ಮಳೆ ಸುರಿಸುವಂತೆ ಮಾಡುತ್ತದೆ.

ಕನ್ನಡಿಗರಿಗೆ ಪರಿಸರದ ವಿಶ್ವ ರೂಪವನ್ನು ಪರಿಚಯ ಮಾಡಿಕೊಡ್ಡಿರುವ ಪರಿಸರ ಋಷಿ ಪೂರ್ಣ ಚಂದ್ರ ತೇಜಸ್ವಿ,"ಇಂದು ಜಗತ್ತಿನ ಅನೇಕ ಭಾಗಗಳಲ್ಲಿ ಹಲವು ಭಗೆಯ ಕಾಡುಗಳಿವೆ. ಆದರೆ ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳಿಗೆ ಸರಿಗಟ್ಟುವಂಥಹವು ಅಮೂಲ್ಯವಾದಂತಹವು ಇನ್ನೆಲ್ಲೂ ಇಲ್ಲ. ದೈತ್ಯಾಕಾರದ ಮರಗಳು ಒಂದರೊಡನೊಂದು ಸೆಣಸುತ್ತಾ ಗಗನಕ್ಕೆ ಚಿಮ್ಮಿರುವ ಈ ಕಾಡುಗಳಲ್ಲಿ ಸೂರ್ಯನ ಬಿಸಿಲು ಎಂದೂ ನೆಲ ತಲುಪುವುದೇ ಇಲ್ಲ. ಇಂಥ ದಟ್ಟಣೆ, ವೈವಿದ್ಯ ಮತ್ತು ಜೀವಜಾಲದ ಜಟಿಲ ಸಂಬಂದಗಳನ್ನು ಜಗತ್ತಿನ ಇನ್ನಾವುದೇ ಪರಿಸರದಲ್ಲಿ ಕಾಣುವುದು ಕಷ್ಟಸಾದ್ಯ. ನಿತ್ಯಹರಿದ್ವರ್ಣದ ಕಾಡುಗಳ ಭಯಂಕರ ಸಂಕೀರ್ಣತೆಯ ದೆಸೆಯಿಂದ ಅವುಗಳನ್ನು ಇನ್ನೂ ಮನುಷ್ಯ ಅರ್ತ ಮಾಡಿಕೊಳ್ಳುವುದು ಸಾದ್ಯವೇ ಆಗಿಲ್ಲ. ದುರ್ದೈವವಶಾತ್ ಈ ಕಾಡುಗಳೆಲ್ಲಾ ಇಂದು ಜಗತ್ತಿನ ಹಿಂದುಳಿದ ಬಡರಾಷ್ಟ್ರಗಳಲ್ಲಿವೆ. ನೂರಾರು ವರ್ಷಗಳ ಕಾಲ ಸಾಮ್ರಾಜ್ಯಶಾಹಿ ಶೋಷಣೆಗೆ ತುತ್ತಾದ ಈ ದೇಶಗಳು ಇಂದು ಅಭಿವೃದ್ಧಿ ಸಾಧಿಸಲು ತಮ್ಮ ಸೀಮಿತ ಸಂಪನ್ಮೂಲಗಳನ್ನೇ ಬಳಸಬೇಕಾಗಿದೆ. ಹಾಗಾಗಿ ಜೀವ ಜಗತ್ತಿನ ಅಮೂಲ್ಯ ನಿಧಿಗಳಾದ ಈ ಕಾಡುಗಳು ನಾಶವಾಗುವ ಅಪಾಯವನ್ನೆದುರಿಸಿತ್ತಿದೆ. ಈ ಕಾಡುಗಳನ್ನು ಅರ್ಥಮಾಡಿಕೊಳ್ಳುವ ಮೊದಲೇ ಇವು ಇಲ್ಲವಾಗಬಹುದು. ಒಂದಂತೂ ಖಚಿತ, ಈ ಕಾಡುಗಳು ನಾಶವಾದರೆ ಮತ್ತೆ ಮನುಷ್ಯ ಇವುಗಳನ್ನು ಪುನಃ ಸೃಷ್ಟಿಸಲು ಸಾದ್ಯವಾಗುವುದಿಲ್ಲ. ಸಮಶಿತೋಷ್ಣವಲಯದ ಸರಳ ಕಾಡುಗಳಂತಲ್ಲದೆ ಜೀವಜಾಲದ ಅತ್ಯಂತ ಸಂಕೀರ್ಣ ಸಮೀಕರಣಗಳಾಗಿರುವ ಈ ಕಾಡುಗಳನ್ನು ನಾವು ನೆಟ್ಟು ಬೆಳೆಸಿ ಪುನಃ ಸೃಷ್ಟಿ ಮಾಡುವುದು ಅಸಾದ್ಯ.

ಈ ಕಾಡುಗಳು ಭೂಮಂಡಲದಲ್ಲಿ ಭೂಮದ್ಯ ರೇಖೆಯಿಂದ 20. ಡಿಗ್ರಿ ದಕ್ಷಿಣಕ್ಕೂ ಉತ್ತರಕ್ಕೂ ಹಬ್ಬಿವೆ. ಇವು ಇರುವ ಪ್ರಮುಖವಾದ ಜಾಗಗಳೆಂದರೆ ದಕ್ಷಿಣ ಅಮೇರಿಕಾದ ಬ್ರೆಜಿಲ್ ನಲ್ಲಿ, ಅಫ್ರಿಕಾದ ಕಾಂಗೋ ಮತ್ತು ನೈಲ್ ಜಲಾಯನ ಪ್ರದೇಶಗಲಲ್ಲಿ ಮತ್ತು ಇಂಡೋ ಮಲಯ ದೇಶಗಳಲ್ಲಿ"ಎನ್ನುತ್ತಾರೆ (ಪೂರ್ಣಚಂದ್ರ ತೇಜಸ್ವಿ, 1993).

ಇದರಲ್ಲಿ ಅಮೇಜಾನ್ ಜಲಾನಯನ ಪ್ರದೇಶದ ಕಾಡು ಭೂಮಂಡಲದ ಮೇಲಿನ ಅತಿದೊಡ್ಡ ನಿತ್ಯಹರಿದ್ವರ್ಣದ ಕಾಡು ಎಂದು ಹೇಳಬಹುದು. ಕೊಲಂಬಿಯ, ವೆನಿಜೂಲ ಪನಾಮದಿಂದ ಹಿಡಿದು ಬ್ರೆಜಿಲ್ನ ಅಮೇಜಾನ ಮುಖಜ ಭೂಮಿಯವರೆಗೂ ಇದು ಹಬ್ಬಿದೆ. ಭಾರತ, ಮಲಯ, ಸುಮಾತ್ರ ಮತ್ತು ವಿಯೆಟ್ನಾಂ ದೇಶಗಳಲ್ಲಿರುವ ಕಾಡುಗಳನ್ನು ಮಾನ್ಸೂನ್ ಕಾಡುಗಳೆಂದು ಕರೆಯುತ್ತಾರೆ.

## 3. ಪಶ್ಚಿಮ ಘಟ್ಟಗಳ ಕಾಡುಗಳ ನದಿಗಳು ಮತ್ತು ಅದರ ಮುಲಗಳು:

ಭಾರತದ ನಾಲ್ಕು ಮುಖ್ಯವಾದ ನದಿಗಳಿಗೆ ಪಶ್ಚಿಮ ಘಟ್ಟದ ಕಾಡುಗಳು ತವರುಮನೆಯಾಗಿದೆ. ಗೋದಾರಿ, ಕಾವೇರಿ, ಕೃಷ್ಣ, ತಮಿರ ಪರನಿ ಮತ್ತು ತುಂಗಭದ್ರ ಪಶ್ಚಿಮ ಘಟ್ಟದ ಪರ್ವತಗಳಲ್ಲಿ ಹುಟ್ಟುವ ಪ್ರಮುಖ ನದಿಗಳಾಗಿವೆ. ಈ ನದಿಗಳ ಉಪನದಿಗಳು, ಚಿಲುಮೆಗಳು ಮುಂಗಾರು ಮಳೆಗಾಲದಲ್ಲಿ ಈ ನದಿಗಳನ್ನು ಕೂಡಿ ಹರಿಯವುದರಿಂದ ಈ ನದಿಗಳು ತುಂಬಿ ಹರಿಯುತ್ತವೆ. ಈ ನದಿಗಳೆಲ್ಲಾ ಇಳಿಜಾರು ಪ್ರಮಾಣವನ್ನು ಅನುಸರಿಸಿ ಪಶ್ಚಿಮ ಘಟ್ಟದ ಪರ್ವತಗಳ ಪೂರ್ವ ಭಾಗಕ್ಕೆ ಹರಿದು ಬಂಗಾಳ ಕೊಲ್ಲಿಯನ್ನು ಸೇರುತ್ತವೆ.

**ಮುಖ್ಯವಾದ ಉಪನದಿಗಳು:** ಭದ್ರ, ಭವಾನಿ, ಭೀಮ, ಮಲಪ್ರಭ, ಘಟಪ್ರಭ, ಹೇಮಾವತಿ, ಕಬಿನಿ, ಪೆರಿಯಾರ್, ಭರತ ಪೂಜ್ಞ, ನೇತ್ರಾವತಿ, ಶರಾವತಿ, ಮಹಾದಾಯಿ ಮತ್ತು ಜುವಾರಿ, ಇದರಲ್ಲಿ ಜುವಾರಿ ಪಶ್ಚಿಮ ಘಟ್ಟದ ಪಶ್ಚಿಮಕ್ಕೆ ಹರಿದು ಅರಬ್ಬಿ ಸಮುದ್ರ ಸೇರುತ್ತವೆ. ಇವು ಅತ್ಯಂತ ರಭಸವಾಗಿ ಹರಿಯುವುದರಿಂದ ಆಳವೂ ಹೆಚ್ಚು.

ಈ ನದಿಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸಿರುವುದರಿಂದ ಈ ಭಾಗದ ರಾಜ್ಯಗಳ ವ್ಯವಸಾಯ ಮತ್ತು ವಿದ್ಯುತ್ಶಕ್ತಿಯ ಮುಲಗಳಾಗಿವೆ. ಈ ಅಣೆಕಟ್ಟುಗಳು ಈ ಭಾಗದ ವ್ಯವಸಾಯೋತ್ಪನ್ನ ಗಳಿಗೆ, ಮೀನುಗಾರಿಕೆಗೆ (ಮಹಾಶಿರ, ಸೀನೀರ ಮೀನು ಮುಖ್ಯವಾದವು.) ವಾಣಿಜ್ಯೋದ್ಯಮಕ್ಕೆ ಈ ಅಣೆಕಟ್ಟುಗಳು ಮುಖ್ಯವಾದ ಆಧಾರವಾಗಿದೆ.

| **ಮುಖ್ಯವಾದ ಅಣೆಕಟ್ಟುಗಳು** | **ಮುಖ್ಯವಾದ ಜಲಪಾತಗಳು** |
|---|---|
| ಕೋಯ್ನ-ಮಹಾರಾಷ್ಟ್ರ | ದೂದ್ ಸಾಗರ್ |
| ಲಿಂಗನಮಕ್ಕಿ ಮತ್ತು ಶರಾವತಿ-ಕರ್ನಾಟಕ | ಜೋಗ್, ಶಿವನ ಸಮುದ್ರ |
| ಮೆಟ್ಟೂರು ಮತ್ತು ಪೈಕಾರ-ತಮಿಳುನಾಡು | ಹೊಗೆನಕಲ್ |
| ಪರಂಬಿ ಕುಲಮ್ ಮತ್ತು ಇಡುಕ್ಕಿ- ಕೇರಳ | ಕುಂಚಿಕಲ್, ಉಂಚಲ್ಲಿ |

**ಮನುಷ್ಯ ನಿರ್ಮಿತ ಜಲ ಸರೋವರಗಳು**

ಊಟಿ- ನೀಲಗಿರಿ ಪರ್ವತಗಳು

ಕೊಡೈಕೆನಾಲ್, ಬೇರಿಜಮ್-ಪಳನಿ ಪರ್ವತಗಳು

ಪೂಕಾಡು, ದೇವಿಕುಲಂ, ಲೆಟ್ಟಮಿ-ಕೇರಳ

## 4. ಪಶ್ಚಿಮ ಘಟ್ಟದ ಪರ್ವತಗಳ ಹವಾಮಾನ

ಪಶ್ಚಿಮ ಘಟ್ಟದ ಪರ್ವತಗಳ ಹವಾಮಾನ ಸಮುದ್ರ ಮಟ್ಟಕ್ಕಿಂತ ಅದು ಇರುವ ಎತ್ತರವನ್ನು ಮತ್ತು ಭೂ ಮದ್ಯ ರೇಖೆಯಿಂದ ಅದು ಇರುವ ದೂರವನ್ನು ಅವಲಂಬಿಸಿ ವಿರಳವಾಗಿತ್ತಾ ಹೋಗುತ್ತದೆ. ಪರ್ವತಗಳ ಕೆಳಭಾಗದ ಆದ್ರತೆಯನ್ನು ಸಮುದ್ರಕ್ಕೆ ಅದು ಇರುವ ಸಾಮಿಪ್ಯ ನ್ನು ಮತ್ತು ಸೂರ್ಯನ ಉಷ್ಣತೆ ಕೆಳಭಾಗವನ್ನು ತಲುಪುವುದನ್ನು ಅವಲಂಬಿಸಿ ಬದಲಾವಣೆ ಹೊಂದುತ್ತದೆ. ಉತ್ತರ ಪಶ್ಚಿಮ ಘಟ್ಟದ ಪರ್ವತಗಳ ಇಳಿಜಾರು 1500ಮೀ. ಗಿಂತ ಹೆಚ್ಚು ಆಗಿದ್ದಲ್ಲಿ, ದಕ್ಷಿಣ ಪಶ್ಚಿಮ ಘಟ್ಟದ ಪರ್ವತಗಳ ಎತ್ತರ 2,000ಮೀ. ಗಿಂತ ಹೆಚ್ಚು ಆಗಿದ್ದಲ್ಲಿ ಉಷ್ಣತೆ ಅಧಿಕವಾಗಿರುತ್ತದೆ. ಪಶ್ಚಿಮ ಘಟ್ಟದ ಪರ್ವತಗಳ ವಾರ್ಷಿಕ ಹವಾಮಾನ15ಡಿಗ್ರಿ ಸೆಲ್ಸಿಯಸ್ ಆಗಿರುತ್ತದೆ. ಚಳಿಗಾಲದಲ್ಲಿ ಸಾಮಾನ್ಯವಾಗಿ ಇಲ್ಲಿ ಹವಾಮಾನ 0 ಡಿಗ್ರಿ ಸೆಲ್ಸಿಯಸ್ ಆಗುರುತ್ತದೆ. ದಕ್ಷಿಣದಲ್ಲಿ ಹವಾಮಾನವು 20 ಡಿಗ್ರಿ ಸೆಲ್ಸಿಯಸ್ ಇದ್ದರೆ ಉತ್ತರದಲ್ಲಿ 24 ಡಿಗ್ರಿ ಸೆಲ್ಸಿಯಸ್ ಚಳಿಗಾಲದಲ್ಲಿ ಸಾಮಾನ್ಯ ತಾಪಮಾನ ದಕ್ಷಿಣ ಮತ್ತು ಪಶ್ಚಿಮ ಘಟ್ಟಗಳ ಪರ್ವತಗಳಲ್ಲಿ ಅತ್ಯಂತ ಕಡಿಮೆ ತಾಪವಾನ ಅತ್ಯಂತ ತೇವಾಂಶವಿರುವಾಗಲೂ ಕಂಡುಬಂದಿದೆ.

ಮುಂಗಾರು ವರ್ಷಧಾರೆಯ ಕಾಲದಲ್ಲಿ (ಜೂನ್ ನಿಂದ ಸೆಪ್ಟಂಬರ್ ಅವಧಿ) ಪಶ್ಚಿಮ ದಿಕ್ಕಿನತ್ತ ಮುಖಮಾಡುತ್ತ ಹೊರಟ ಮಳೆಯ ತೇವಾಂಶದಿಂದ ಭಾರವಾದ ಮೋಡಗಳನ್ನು ಅಂದರೆ ಮುಂಗಾರು ಮಾರುತಗಳನ್ನು, ಪಶ್ಚಿಮ ಘಟ್ಟದ ಪರ್ವತಗಳಲ್ಲಿ ಕಂಡು ಬರುವ ಗಾಳಿ ಸಂಚಾರವಿಲ್ಲದ ವಾತಾವರಣ, ಮೋಡಗಳನ್ನು ಮೇಲಕ್ಕೇರುವಂತ ಮಾಡಿ ಚಲಿಸದಂತೆ ಮಾಡುತ್ತವೆ. ಇದರಿಂದ ಈ ಪರ್ವತಗಳ ಮೇಲೆ ಎತೇಚ್ಚ ಮಳೆ ಸುರಿಯುತ್ತವೆ. ಪಶ್ಚಿಮ ಘಟ್ಟದ ಪರ್ವತಗಳಲ್ಲಿ ಕಂಡು ಬರುವ

ಗಾಳಿ ಸಂಚಾರವಿಲ್ಲದ ವಾತಾವಾರಣ, ಮೋಡಗಳನ್ನು ಮೇಲಕ್ಕೇರುವಂತೆ ಮಾಡಿ ಚಲಿಸದಂತೆ ಮಾಡುತ್ತವೆ. ಇದರಿಂದ ಈ ಪರ್ವತಗಳ ಮೇಲೆ ಎತ್ತೇಚ್ಛ ಮಳೆ ಸುರಿಯುತ್ತದೆ. ಪಶ್ಚಿಮ ಘಟ್ಟದ ಪರ್ವತಗಳ ಮೇಲೆ ಮಳೆ ಬೀಳುವ ಪ್ರಮಾಣ 300ಸೆ.ಮೀ. ನಿಂದ 400 ಸೆ.ಮೀ. ಆಗಿದೆ. ಕೆಲವು ಪ್ರದೇಶಗಳಲ್ಲಿ ಅದು 900 ಸೆ.ಮೀ. ಆಗಿದ್ದು ಈ ಭಾಗದಲ್ಲಿ ಸರಾಸರಿ 200 ಸೆ.ಮೀ. ಮಳೆಯಾಗುತ್ತದೆ. ಮಳೆಯು ಈ ಸರಾಸರಿ ಭೂಭಾಗವನ್ನು ಅವಲಂಬಿಸಿರುವುದಿಲ್ಲ ಉತ್ತರ ಮಹಾರಪ್ಟ್ರದಲ್ಲಿ ದೀರ್ಗ ಕಾಲದ ಬೇಸಿಗೆಯ ನಂತರ ದೀರ್ಘ ಕಾಲ ಮಳೆಯನ್ನು ಪಡೆದರೆ ಭೂಮದ್ಯ ರೇಖೆಗೆ ಸಮೀಪದಲ್ಲಿರುವ ಪ್ರದೇಶಗಳು ಕೆಲವೇ ತಿಂಗಳಕಾಲ ಕಡಿಮೆ ಮಳೆಯನ್ನು ಪಡೆಯುತ್ತವೆ (Ranjit Daniels, Biodiversity of the Western Ghats – An Overview).

## 5. ಪಶ್ಚಿಮ ಘಟ್ಟದ ಪರ್ವತಗಳ ಜೀವ ಪರಿಸರ ವಿಜ್ಞಾನ

ಪಶ್ಚಿಮ ಘಟ್ಟದ ಪರ್ವತಗಳಲ್ಲಿ ನಾಲ್ಕು ಉಷ್ಣವಲಯದ ಕಾಡುಗಳೂ ಮತ್ತು ನಾಲ್ಕು ಉಪಉಷ್ಣವಲಯದ ಕಾಡುಗಳೂ ಕಂಡುಬರುತ್ತವೆ. ಉತ್ತರ ಪಶ್ಚಿಮ ಘಟ್ಟದ ಪರ್ವತಗಳು ತೇವಾಂಶ ಭರಿತ ಎಲೆ ಉದುರುವ ಕಾಡುಗಳಾದರೆ, ಬೆಟ್ಟಗಳ ಮಲೆಯ ಮಳೆ ಕಾಡುಗಳಾದರೆ, ದಕ್ಷಿಣ ಪಶ್ಚಿಮ ಘಟ್ಟದ ಪರ್ವತಗಳೂ ಕೂಡ ತೇವಾಂಶ ಬರಿತ ಎಲೆ ಉದುರುವ ಬೆಟ್ಟಗಳ ಮಲೆಯ ಮಳೆ ಕಾಡುಗಳಾಗಿವೆ. ದಕ್ಷಿಣದ ಕಾಡುಗಳಿಗಿಂತ ಉತ್ತರದ ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳು ಸಾಮಾನ್ಯವಾಗಿ ಒಣಗಿರುತ್ತವೆ ಮತ್ತು ಅಧಿಕ ಇಳಿಜಾರನ್ನು ಹೊಂದಿದ್ದು, ಉತ್ತರದ ಕಾಡುಗಳನ್ನು ಹೆಚ್ಚು ಎಲೆ ಉದುರುವ ಕಾಡುಗಳ ವಾತಾವರಣಕ್ಕೆ ಅವಕಾಶ ಮಾಡಿಕೊಟ್ಟಿವೆ. ಎಲೆ ಉದುರುವ ಕಾಡುಗಳು ಪ್ರಧನಾವಾಗಿ ತೇಗದ ಮರಗಳ ಬೆಳೆಯ ಪ್ರಾಭಲ್ಯಕ್ಕೆ ಅವಕಾಶ ನೀಡುತ್ತದೆ. 1000ಮೀ. ಗಿಂತ ಹೆಚ್ಚು ಇಳಿಜಾರಿನ ಉತ್ತರದ ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳು ಆದ್ರತೆಯಿಂದ ಕೂಡಿದ್ದು, ಹೆಚ್ಚು ಶೀತವಾದ ಪರ್ವತಗಳಾಗಿವೆ. ಇಲ್ಲಿ ಬೆಳೆಯುವ ಲಾರೇಸಿ (Lauraceae)) ಕುಟುಂಬದ ಸಸ್ಯಗಳಿಂದಾಗಿ ನಿತ್ಯ ಹರಿದ್ವರ್ಣದ ಕಾಡುಗಳು ಎಂದು ಕರೆಯಲ್ಪಡುತ್ತವೆ.

ವಯ್ ನಾಡಿನ ನಿತ್ಯ ಹರಿದ್ವರ್ಣದ ಕಾಡುಗಳು ಉತ್ತರ ಮತ್ತು ದಕ್ಷಿಣ ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳ ಪರಿವರ್ತನೆಯ ಕೇಂದ್ರ ಪ್ರದೇಶವಾಗಿದೆ. ದಕ್ಷಿಣ ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳು ಹೆಚ್ಚು ತೇವಾಂಶಭರಿತ ಮತ್ತು ಹೆಚ್ಚು ಜೀವ ಸಂಕುಲಗಳನ್ನು ಒಳಗೊಂಡಿರುವ ಕಾಡುಗಳಾಗಿವೆ. ಈ ಪರ್ವತಗಳ ಇಳಿಜಾರುಗಳಲ್ಲಿ ಕ್ಯುಲೇನಿಯಂ (Cullenia) ಜಾತಿಯ ಮರಗಳನ್ನು, ತೇಗದಮರ ('Dipterocarps') ಗಳನ್ನು ಇನ್ನಿತರ ಜಾತಿಯ ಮರಗಳನ್ನು ಒಳಗೊಂಡಿರುತ್ತದೆ. ಇಂತಹ ಆದ್ರ ಮತ್ತು ತೇವಾಂಶಭರಿತ ಕಾಡುಗಳನ್ನು ದಕ್ಕನ್ ಪ್ರಸ್ಥ ಭೂಮಿಯ ಒಣಹವೆಗೆ ಪರಿವರ್ತಿಸುವ ಸಂಧಿ ತಾಣಗಳೆಂದರೆ ಸದಾ ಮೋಡಗಳ ನೆರಳಿನಲ್ಲಿರುವ ಪಶ್ಚಿಮ ಘಟ್ಟಗಳ ಪೂರ್ವ ಇಳಿಜಾರುಗಳು. 1000ಮೀ. ಎತ್ತರವಿರುವ ದಕ್ಷಿಣ ಪಶ್ಚಿಮ ಘಟ್ಟದ ಪರ್ವತಗಳ ಮಳೆಯ ಕಾಡುಗಳು ತನ್ನ ಸುತ್ತ ಮುತ್ತಲಿನ ಕಾಡುಗಳಿಗಿಂತ ಹೆಚ್ಚು ತೇವಾಂಶಭರಿತವಾಗಿಯೂ ಮತ್ತು ಹೆಚ್ಚು ಶೀತ ಪ್ರದೇಶವಾಗಿಯೂ ಇರುವಂತೆ ಮಾಡಿದೆ. ನಿತ್ಯಹರಿದ್ವರ್ಣದ ಮರಗಳಿಂದ ಕೂಡಿರಿವ ಪರ್ವತಗಳು ಇವಾಗಿದ್ದರೂ ಕೆಲವು ಪರ್ವತಗಳ ತುದಿಯಲ್ಲಿ ಹುಲ್ಲುಗಾವಲುಗಳೂ, ಕಾಡುಗಳೂ ಕ್ಷೀಣಗತಿಯಲ್ಲಿ ಇರುವುದು ಕಂಡುಬರುತ್ತದೆ. ಈ ದಕ್ಷಿಣ ಮತ್ತು ಪಶ್ಚಿಮ ಘಟ್ಟಗಳ ಮಳೆಯ ಕಾಡುಗಳು ಭಾರತ ಉಪಖಂಡದ ಅತಿ ಹೆಚ್ಚು ಜೀವ ಸಂಕುಲಗಳನ್ನು ಒಳಗೊಂಡಿರುವಂತಹ ಪರಿಸರ ಪ್ರದೇಶಗಳಾಗಿವೆ. ಪಶ್ಚಿಮ ಘಟ್ಟದ ಪರ್ವತಗಳಲ್ಲಿ ಕಂಡುಬರುವ ಶೇಕಡಾ 80% ಭಾಗ ಹೂವಿನ ಸಸಿಗಳ ಜಾತಿಗಳು ಈ ದಕ್ಷಿಣ ಪಶ್ಚಿಮ ಘಟ್ಟದ ಪರ್ವತಗಳ ಮಳೆಯ ಕಾಡುಗಳಲ್ಲಿ ಕಂಡುಬರುತ್ತದೆ.

ಕರ್ನಾಟಕದ ಪಶ್ಚಿಮ ಘಟ್ಟದ ಪರ್ವತಗಳ ಮಳೆಯ ಕಾಡುಗಳಲ್ಲಿ ಕಂಡುಬರುವ ಮರಗಳನ್ನು ಈ ರೀತಿ ವರ್ಗೀಕರಿಸಬಹುದಾಗಿದೆ:

## 6. ಕರ್ನಾಟಕದ ಕಾಡುಗಳು

ಕರ್ನಾಟಕದ ಕಾಡುಗಳನ್ನು **ಐದು** ಭಾಗಗಳಾಗಿ ವಿಂಗಡಿಸುತ್ತಾರೆ: (ರಾಮಸ್ವಾಮಿ, 1969)

1. ಉಷ್ಣ ವಲಯದ ತೇವಪೂರಿತ ನಿತ್ಯಹರಿದ್ವರ್ಣ ಕಾಡುಗಳು
2. ಉಷ್ಣ ವಲಯದ ಭಾಗಷಃ ನಿತ್ಯಹರಿದ್ವರ್ಣ ಕಾಡುಗಳು
3. ಬೇಸಿಗೆಯಲ್ಲಿ ಎಲೆ ಉದುರುವ ಮಲೆನಾಡಿನ ಕಾಡುಗಳು
4. ಬೇಸಿಗೆಯಲ್ಲಿ ಎಲೆ ಉದುರುವ ಮೈದಾನ ಸೀಮೆಯ ಒಣಕಾಡುಗಳು
5. ಕಳ್ಳಿ ಕುರುಚಲು ಗಿಡಗಳನ್ನೊಳಗೊಂಡ ಒಣ ಕಾಡುಗಳು

ಇದರಲ್ಲಿ 'ಉಷ್ಣ ವಲಯದ ತೇವಪೂರಿತ ನಿತ್ಯಹರಿದ್ವರ್ಣದ ಕಾಡುಗಳು' ಮತ್ತು ಉಷ್ಣ ವಲಯದ ಭಾಗಷಃ ನಿತ್ಯಹರಿದ್ವರ್ಣ ಕಾಡುಗಳು 1295 ಚ.ಮೈಲಿಗಳು ಹರಿಡಿಕೊಂಡಿದ್ದು ಇವು ಬೆಳಗಾವಿ, ಧಾರವಾಡ, ಉತ್ತರ ಕನ್ನಡಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಹಾಸನ, ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಕರ್ನಾಟಕದಲ್ಲಿ ಪಶ್ಚಿಮ ಘಟ್ಟದ ಪರ್ವತಗಳು ಹರಡಿಕೊಂಡಿರುವ ಪ್ರದೇಶಗಳೂ ಇವೇ ಆಗಿವೆ. ನಿತ್ಯ ಹರಿದ್ವರ್ಣ ಕಾಡುಗಳ ಒಂದು ರೂಪಾಂತರವಾದ ಶೋಲಾ ಕಾಡುಗಳು 1000ಮೀ. ಗಳಿಗಿಂತ ಎತ್ತರವಾದ ಪರ್ವತ ಪ್ರದೇಶಗಳ ಝರಿಗಳ ಇಕ್ಕೆಲಗಳಲ್ಲಿ ಪಟ್ಟಿಗಳಂತೆ ಬೆಳೆದಿರುತ್ತವೆ. ಕರ್ನಾಟಕದ ಬಾಬಾ ಬುಡನ್ ಗಿರಿ, ಕುದುರೆ ಮುಖ ಮತ್ತು ಬಿಳಿಗಿರಿರಂಗನ ಬೆಟ್ಟದಲ್ಲಿ ಈ ಶೋಲಾ ಕಾಡುಗಳಿವೆ. ಈ

ಕಾಡುಗಳಲ್ಲಿ ಮರಗಳು ಹೆಚ್ಚು ಎತ್ತರಕ್ಕೆ ಬೆಳೆಯುವುದಿಲ್ಲ. ಇಂತಹ ಪರ್ವತಗಳ ತುದಿಯಲ್ಲಿ ಗಾಳಿ ಹೊಡೆತಗಳಿರುವುದರಿಂದ ಅಲ್ಲಿ ಹುಲ್ಲುಗಾವಲುಗಳು ಕಂಡುಬರುತ್ತವೆ. ತಮಿಳುನಾಡಿನ ನೀಲಗಿರಿ, ಕೊಡೈಕೆನಾಲ್, ಪಳಿನಿ ಮತ್ತು ಕೇರಳಗಳಲ್ಲೂ ಈ ಷೋಲಾ ಕಾಡುಗಳಿವೆ.

## ಷೋಲಾ ಕಾಡುಗಳಲ್ಲಿ ಬೆಳೆಯುವ ಮರಗಳು:

**ದೊಡ್ಡ ಮರಗಳು:** ಬಿಳೀ ದೇವದಾರು (Dysoxylum malabaricum), ಕಿರಲ್ ಬೋಘಿ (Hopea parviflora), ಅಡವಿ ಬಿಕ್ಕೆ (Gardenia obtusa), ನಾಗ ಸಂಪಿಗೆ (Gardenia obtusa), ಗಂಧ ಗರಿಗೆ (Toona ciliate), ಹಲಸು (Artocarpus heterophyllus), ಹೆಬ್ಬಲಸು (Artocarpus hirsuta), ಬಿಳೀ ಸಂಪಿಗೆ (Michelia nilagirica), ಸೌಲುದಿ (Vitex altissima), ಪಾದ್ರಿ (Stereospermum chelonioides), ದಾಲ್ಚಿನ್ನಿ (Cinnamonun zeylanicum, ಜಯಕಾಂತಾಳ (Sterculia gutta), ಮಂದ ಧೂಪ (Canarium strictum), ಕಣ್ಮುಟಿಕೆ Garcinia Morella).

**ಸಣ್ಣ ಮರಗಳು:** ರುದ್ರಾಕ್ಷಿ Garcinia Morella), ಒಂಟೆ ಮರ (Artocarpus lakoocha), ಮಲ್ಲೈ (Diospyros ebenum), ಕುಂಕುಮದ ಮರ (Mallotus phillippenses).

ಕರ್ನಾಟಕದ ಪಶ್ಚಿಮ ಘಟ್ಟದ ಕಾಡುಗಳಲ್ಲಿ ಕಂಡುಬರುವ ಮರಗಳನ್ನು ಮೂರು ವಿಧವಾಗಿ ವಿಂಗಡಿಸುತ್ತಾರೆ (ರಾಮಸ್ವಾಮಿ, 1969). ಅ. ಮೇಲ್ಪದರದ ವೃಕ್ಷಗಳು (Top canopy), ಆ. ಮದ್ಯದ ಪದರದ ವೃಕ್ಷಗಳು (Middle canopy) ಇ. ಕೆಳಗಿನ ಹಂತದ ವೃಕ್ಷಗಳು (Lower canopy).

## ಅ. ಮೇಲ್ಪದರದ ವೃಕ್ಷಗಳು (Top canopy) (125 ಅಡಿಗಿಂತಲೂ ಹೆಚ್ಚು ಎತ್ತರವಿರುತ್ತದೆ):

ನಾಗಸಂಪಿಗೆ (Mesua ferrea), ಕಿರಲ್ ಬೋಘಿ (Hopea parviflora), ಧೂಪ (Veteria indica), ಮಂದಧೂಪ (Canarium strictum), ಬೂರಗ (Bombax ceiba), ಗಂಧಗರಿಗೆ (Bombax ceiba), ಹೈಗ (Hopea wightiana), ವಾಲಿಮರ (Dipterocarpus indicus), ಕುವೆ (Calophyllum tomentosum), ಬೊಬ್ಬೆ ( Calophyllum wightianum), ಮಾವು (Mangifera indica), ಕುಟುಗೇರಿ (Holigrana arnottiana), ಹವಳಿಗೆ (Acrocarpus fraxinifolius), ಪಗಡೆ ಮರ (Mimusops elengi),, ಕಾಡುಹಿಪ್ಪೆ (Madhuca malabarica), ಕರಾಚಿ (Hardwickia binata), ಚಿಟ್ಟುತಂದ್ರಿ ಮರ (Machilus macrantha), ಗೋಗುಲ್ ಧೂಪ (Ailanthus malagarica),, ಅಜ್ಜನ ಪಟ್ಟೆ (Antiaris toxicaria), ಹಲಸು (Artocarpus heterophyllus), ಹೆಬ್ಬಲಸು (Artocarpus hirsuta), ದಾಲ್ಮರ (Chickrassia tabularis), ಗೊಬ್ರುನ್ಯೆಎರುಲ್ (Bischofia javanica), ಕಾಡು ಕುಂಬಳ (Trewia nudiflora), ಪಾಪ್ಪೊಂಟ (Dolichopsis dlliptica)..

## ಆ. ಮದ್ಯದ ಪದರದ ವೃಕ್ಷಗಳು (Middle canopy) (ಸರಾಸರಿ 50 ಅಡಿಗಳಿಗಿಂತಲೂ ಹೆಚ್ಚು ಎತ್ತರ):

ಹೆಟ್ಟೆಬಾಗೆ (Albizzia chinensis), ಸಂಪಿಗೆ (Michelia champaka), ಕಲ್ತೇಗ (Dillenia pentagyna), ಹಾಲ (Garuga pinnara), ನಂದಿ (Lagerstroemia lanceolata), ದೇವಗರಿಗೆ (Garcinia xanthochymus), ಬಿಳೀ ಸಂಪಿಗೆ (Michaclia nilagirica), ರುದ್ರಾಕ್ಷಿ (Elaeocarpus tuberculatus),, ಕಾಡು ಹುಣಿಸೆ (Pithecellobium bigeminum), ಒಂಟೆ ಮರ (Artocarpus lakoocha), ದಾಲ್ಚಿನ್ನಿ (Cinnamomum macrocarpus), ಜಂತಲ (Alstonia scholaris), ಮಲ್ಲೈ (Diospyros ebenum),, ತಿಂಡುಕ (Diospyros paniculata), ತೋರೆತ್ತಿ (Hydno carpus laurifolia), ಅರದಳನ (Garcinia cambogia), ಜಯಕಾಂತಳ (Sterculia gutta), ಜುಮ್ಮಿ ಮರ (Zanthoxylum budrunga), ಸಗದೆ (Schieichera oleosa), ನೇರಳೆ (Syzygium cumini), ಚಲ್ಲ (Lagerstroemia speciosa), ನಂಜಿನ ಕೊರಡು (Strychnos nux-vomica), ಪಾದ್ರಿಮರ (Sterospermum chelonioides), ಗೊಡ್ಡು ಮಿತ್ತಿ (Ficus glomerata), ಅತ್ತಿ ಮರ (Ficus tsiela), ಬೀಳೆ ಬಸುರಿ (ficus tsiela), ಜಂಬೆಮರ (Xylia xylocarpa), ಹಾಲ್ಮಡ್ಡಿ (Litsaea wightiana), ಪಿಂಡೆಕಾಯಿ ಮರ (Myristica malabarica), ರಾಮನದಿಕೆ (Myristica magnifica), ಸೌಲಾದಿ (Vitex altissima), ಸುರಹೊನ್ನೆ (Guttiferae).

## ಇ. ಕೆಳಗಿನ ಹಂತದ ವೃಕ್ಷಗಳು (Lower canopy) (ಸರಾಸರಿ 25 ಅಡಿಗಳಷ್ಟು ಎತ್ತರ):

ಬಸವನ ಪಾದ (Bauhinia malabarica), ಅಶೋಕ (Saraca indica), ಬೆಟ್ಟದ ನೆಲ್ಲಿ (Emblica officinalis), ಕುಂಕುಮದ ಮರ (Mallotus phillippensis), ಕಾವಲ್ (Careya arborea, ಕೀಚಗ (Erythrina stricta), ಮಟ್ಟ ನೇರಳೆ (Eugenia hemispherica), ಕುನ್ನೇರಳೆಮರ (Eugenia zeylanica), ಲವಂಗ (Syzygium aromaticum), ಕಾಡುನೇರಳೆ (Eugenia laeta), ಸೀಮೆ ನೇರಳೆ (Eugenia floccosa), ಊದಾತಳ್ಳಿ (Memecylon edule), ಬೇಲವಕಣ (Memecylon angustifolium), ಲೋಕುಂದಿ (Memecylon malabaricum), ಕರಿಬೇವು (Murraya koenigii, ಬೆಂಡುವರ (Trema orientalis), ಕುಂಡೆ (Lonicera rainiflora), ಗುರಿಗೆ (Bridelia retusa), ಗೊರವಿ (Ixora arborea).

### ಕೆಳಗಿನ ಹಂತದ ವೃಕ್ಷಗಳ ಅಕ್ಕ-ಪಕ್ಕ ಹಾಗೂ ಕೆಳಭಾಗದಲ್ಲಿ ಕಂಡುಬರುವ ಸಸ್ಯಗಳು:

ಸಣ್ಣ ಬೆತ್ತ (Calamus psuedotenuis), ದೊಡ್ಡ ಬೆತ್ತ (Calamus rotang), ಜಡ್ಡು ಬೆತ್ತ (Calamus thwaitessi) ಬಗಿನಿ (Caryotaurens) ಕಿರು ಈಚಲು (Phonix Humili) ವಾಟೆ (Ochlandra travencorica), ಕೇದಿಗೆ ಜಾತಿಯ ಮರ (Pandanus fureatusw and Pandanus canaranus), ನಿರವಂಜಿ (Salix tetrasperma).

**ಪೊದೆಗಳು:** ವಿಷ್ಣುಧಾರಿಗಿಡ (Clerodendrum inerme), ನಾಯಿತಕ್ಕಲೆ (Clerodendrum serratum), ಕಾರೆ ಗಿಡ (Canthium parviflorum), ನಾಯಿ ಬೇಲ (Limonia acidissima), ಕಂಚು ಪ್ರಾಂತಿ (Macarahga roxburghii), ಎಡಮುರಿ (Hclicteresisisora), ಬೆಳ್ಳೂರೆ ಗಿಡ (Mussaenda frondosa), ಶತಾವರಿ (Asparagus racemosus), ಮಂಗರೆ (Randia brandisii), ಬೋದೀನ (Ardisia solancea).

**ಬಳ್ಳಿಗಳು:** ಮರ್ಸದ ಬಳ್ಳಿ (Calycopteris floribunda), ಮೆಣಸು Piper nigrum, ಅಡಿಕೆ, ಬೀಳು ಬಳ್ಳಿ (Pothos scandens), ಕಾಡು ಮೆಣಸು (Toddalia aculeate), ಪೊಪ್ಲಿ (Ventilago madraspatana), ನೀಟಮ್ Gnetum ula, ಹುಣಸೆ ಬಳ್ಳಿ (Elaegnus latifolia), ಹೆಜ್ಜೀಲ (Elaeagnus kologa), ತಲೆ ಜದರಿ ಹಂಬು (Clematis gouriana).

## 7. ಪಶ್ಚಿಮ ಘಟ್ಟದ ಪರ್ವತಗಳ ಜೀವ ಪ್ರಾಣಿ ಪ್ರಭೇದಗಳು

ಪಶ್ಚಿಮ ಘಟ್ಟದ ಪರ್ವತಗಳು ಸಾವಿರಾರು ಪ್ರಾಣಿ ಪ್ರಭೇದಗಳಿಗೆ ತವರುಮನೆಯಾಗಿದೆ. ಇದರಲ್ಲಿ 325 ಪ್ರಭೇದಗಳು ಇಂದು ಜಗತ್ತಿನಲ್ಲಿ ಅಳಿವಿನ ಅಂಚಿನಲ್ಲಿವೆ. 139 ಸಸ್ತನಿಗಳ ಪ್ರಭೇಧಗಳಲ್ಲಿ 16 ಅಳವಿನ ಅಳಿವಿನ ಅಂಚಿನಲ್ಲಿವೆ. ಅವುಗಳು:

ಮಲಬಾರ್ ಕಿರುಬ, ಸಿಂಹ ಬಾಲದ ಕೋತಿ, ನೀಲಗಿರಿ ಕಾಡುಜಿಂಕೆ ಮತ್ತು ಭಾರತೀಯ ಆನೆಗಳು, ದುರ್ಬಲ ಭಾರತೀಯ ಚಿರುತೆ, ಬಂಗಾಲದ ಹುಲಿ, ನೀಲಗಿರಿ ಬುಕ್ಕಮತ್ತು ಇಂದು. ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳು ಹಲವು ವನ್ಯಪ್ರಾಣಿಗಳ ಅಭಯಾರಣ್ಯಗಳಿಗೆ ಆವಾಸ ಸ್ಥಾನವಾಗಿರುವುವಾದರೂ ಆನೆಗಳ ಸಂರಕ್ಷಣಾ ತಾಣಾ ಮತ್ತು ಹುಲಿಗಳ ಸಂರಕ್ಷಣಾ ತಾಣ ಮುಖ್ಯವಾದುದು. ಭಾರತದಲ್ಲಿ 'ಸುಂದರಬನ' ಹೊರತುಪಡಿಸಿದರೆ ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳಲ್ಲಿ ಹೆಚ್ಚಿನ ಸಂಖ್ಯೆಯ ಹುಲಿಗಳು ಕಂಡುಬರುತ್ತವೆ. ಹಾಗಯೇ ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳಲ್ಲಿ ಭಾರತೀಯ ಆನೆಗಳು ಭಾರತದ ಉಳಿದೆಲ್ಲೆಡೆಗಿಂತ ಹೆಚ್ಚಿನ ಸಂಖ್ಯೆಯಲ್ಲಿವೆ. ಅಪರೂಪವಾದ ನೀಲಗಿರಿ ಬುಕ್ಕ ಅವಸಾನದ ಅಂಚಿನಲ್ಲಿದ್ದದ್ದು ಈಗ 3,312 ಸಂಖ್ಯೆಯಲ್ಲಿ ಕಂಡುಬರುತ್ತದೆ.ಒಂದು ಕಾಲದಲ್ಲಿ ಹೇರಳವಾಗಿದ್ದ ಕಿರುಬ ಇಂದು 250ಕ್ಕಿಂತ ಕಡಿಮೆ ಸಂಖ್ಯೆಯನ್ನು ಮುಟ್ಟಿದೆ. ಸಿಂಹಬಾಲದ ಕೋತಿ ಸುಮಾರು 3500 ಇರಬಹುದೆಂದು ಅಂದಾಜು ಮಾಡಲಾಗಿದೆ.

### ಪಶ್ಚಿಮ ಘಟ್ಟದ ಪರ್ವತಗಳಲ್ಲಿ ಕಂಡು ಬರುವ ಉಭಯಚರಿಗಳು:

ಪ್ರಪಂಚದ ಉಳಿದಾವ ಪ್ರದೇಶಗಳಲ್ಲೂ ಕಂಡುಬರೆದೇ ಇರುವ ಉಭಯಚರಿಗಳು ಪಶ್ಚಿಮ ಘಟ್ಟದ ಕಾಡುಗಳಲ್ಲಿ ಕಂಡುಬರುತ್ತವೆ.ಇಲ್ಲಿ ಕಂಡುಬರುವ 179 ಜಾತಿಯ ಉಭಯಚರಿಗಳಲ್ಲಿ 80% ಭಾಗ ಇಂದು ವಿನಾಶದ ಅಂಚಿನಲ್ಲಿವೆ. ಹಾಗಯೇ 2004ರಲ್ಲಿ ಮಾಡಿದ ಗಣತಿಯ ಆಧಾರದಿಂದ ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳಲ್ಲಿ 288 ಮೀನಿನ ಜಾತಿಗಳು ಕಂಡುಬರುತ್ತವೆ. ಉತ್ತರ ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳಿಗಿಂತ ದಕ್ಷಿಣದ ಕಾಡುಗಳಲ್ಲಿ ಹೆಚ್ಚಿನ ಸಂಖ್ಯೆಯ ಮೀನು ಜಾತಿಗಳು ಕಂಡುಬರುತ್ತವೆ. ಚಾಲ್ಕುಡಿ ನದಿಯೊಂದರಲ್ಲೇ 98 ಜಾತಿಯ ಮೀನುಗಳು ಕಂಡುಬರುತ್ತವೆ. ಹಾಗೆಯೇ ಪೆರಿಯಾರ್, ಭರತಪುಝ, ಪಂಬ ಮತ್ತು ಜಾತಿಗಳು ಕಂಡುಬರುತ್ತವೆ. 2011ರ ಗಣತಿಯ ಪ್ರಕಾರ 97 ಸಿಹಿ ನೀರಿನ ಮೀನುಗಳು ಇಂದು ಅಪಾಯದ ಅಂಚಿನಲ್ಲಿವೆ.

ಪಚ್ಮಿಮ ಘಟ್ಟದ ಪರ್ವತಗಳ ಕಾಡುಗಳಲ್ಲಿ 6,000 ಜಾತಿಯ ಕ್ರಿಮಿ-ಕೀಟಗಳು ಕಂಡುಬರತ್ತವೆ. ಇದರಲ್ಲಿ 344 ಚಿಟ್ಟೆಗಳು, ನೀಲಗಿರಿ ಜೈವಿಕ ಮಂಡಲದಲ್ಲಿಯೇ ಕಂಡುಬರುತ್ತದೆ. 174 ಜಾತಿಯ ಹಾರು ಹುಳುಗಳು ಕಂಡುಬರುತ್ತದೆ. ಇದರಲ್ಲಿ 69 ಜಾತಿಗಳು ಹುಳುಗಳು. ಇವು ನದಿಗಳಲ್ಲಿ ಮತ್ತು ತೊರೆಗಳಲ್ಲಿ ಬದುಕುತ್ತವೆ. ಮೃದ್ವಂಗಿಗಳ ಭಾಗಕ್ಕೆ ಬಂದರೆ ಪಶ್ಚಿಮ ಘಟ್ಟದ ಪರ್ವತಗಳ ಮೇಲೆ ಬೀಳುವ ಕಾಲಮಾನಕ್ಕನುಗುಣವಾದ ಮಳೆಯ ಸ್ವರೂಪದ ಕಾರಣ ಇಲ್ಲಿ ವಾಸಿಸುವ ಹುಳುಗಳು, ಮೃದ್ವಂಗಿಗಳು ಇನ್ನಿತರ ಒಡುಹುಳುಗಳು ಕೆಲವು ಕಾಲ ಜಡಸ್ಥಿತಿಯಲ್ಲಿರುವಂತಹ ಜೀವನ ವಿಧಾನ ನಡೆಸುವುದು ಅನಿವಾರ್ಯವಾಗಿತ್ತು. ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳಲ್ಲಿ ಈವರೆಗೆ 57 ಕುಲಗಳ 24 ಕುಟುಂಬಗಳ 258 ಜಾತಿಯ ಹುಳುಗಳು ಕಂಡುಬಂದಿವೆ. 77 ಜಾತಿಯ ಹೊಸನೀರಿನ ಮೃದ್ವಂಗಿಗಳು ಎಂದಿ ಗಣತಿ ಹೇಳಿದ್ದರೂ ಇದರ ಸಂಖ್ಯೆ ಇನ್ನೂ ಹೆಚ್ಚಾಗಿದೆ.

## 8. ಪಶ್ಚಿಮ ಘಟ್ಟದ ಪರ್ವತಗಳ ಹಕ್ಕಿಗಳು

508 ಜಾತಿಯ ಹಕ್ಕಿಗಳನ್ನು ಈವರೆಗೆ ಗುರುತಿದಲಾಗಿದೆ. ಕರ್ನಾಟಕದಲ್ಲಿ ಕಂಡುಬರುವ 500 ಜಾತಿಯ ಹಕ್ಕಿಗಳು ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳದ್ದೇ ಆಗಿದೆ. ಪಶ್ಚಿಮ ಘಟ್ಟದ ಪರ್ವತಗಳ ಸ್ಥಳೀಯ ಹಕ್ಕಿಗಳಾದ 16 ಜಾತಿಯ ಹಕ್ಕಿಗಳು ಇಂದು ಅವಸಾನದ ಅಂಚಿನಲ್ಲಿವೆ. ಅವುಗಳೆಂದರೆ:

ಕೆಂಪು ಎದೆಯ ನಗೆಮಲ್ಲ, ನೀಲಗಿರಿ ಪಾರಿವಾಳ, ಬಿಳಿ ರೆಕ್ಕೆಯ ಗುಬ್ಬಚ್ಚಿ, ಅಗಲ ಬಾಲದ ಹುಲ್ಲಹಕ್ಕಿ, ಬೂದು ಎದೆಯ ನಗೆಮಲ್ಲ, ಕಿತ್ತಲೆ ಬಣ್ಣದ ಹರಟೆ ಮಲ್ಲ, ಕೆಂಪು ನೊಣ ಹಿಡುಕ, ನೀಲಗಿರಿ ಮರದ ಪಾರಿವಾಳ, ನೀಲಗಿರಿ ಪಿಪ್ಪಿಕ, ಮಲಬಾರು ಗಿಳಿ, ಮಲಬಾರು ಬೂದು ಹಾರ್ನ್ಬಿಲ್, ಬಿಳಿ ಹೊಟ್ಟೆಯ ಮಟ ಪಕ್ಷಿ, ಬೂದು ಕತ್ತರಿನ ಬುಲ್ ಬುಲ್, ಮತ್ತು ಹಳದಿ ಬೆನ್ನಿನ ಸೂರಕ್ಕಿ.

ಇದರಲ್ಲಿ ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳಲ್ಲಿದ್ದ ಗುಮ್ಮಾಡಲು ಹಕ್ಕಿಗಳ ನಿರ್ಗಮನದ ಕತೆಯನ್ನು ಪೂರ್ಣಾ ಚಂದ್ರ ತೇಜಸ್ವಿ ಕಣ್ಣಾರೆ ಕಂಡು ಅದನ್ನು ಹೀಗೆ ದಾಕಲಿಸಿದ್ದಾರೆ. "ತೀರ್ಥಾ ಹಳ್ಳಿಯ ಕಾಡುಗಳಲ್ಲಿದ್ದ ಗುಮ್ಮಾಡಲು ಹಕ್ಕಿ ಅಥವಾ ಇಂಪೀರಿಯಲ್ ಪಿಜನ್ ಗಳು ಇದ್ದಕ್ಕಿಂದ್ದಂತೆ ಕೆಲವು ವರ್ಷಗಳ ಹಿಂದೆ ಒಮ್ಮಲೇ ಅಲ್ಲಿಂದ ನಿರ್ಗಮಿಸಿದವು. ಅಲ್ಲಿಯ ಕಾಡುಗಳಲ್ಲೇನೂ ಅಂಥ ಬದಲಾವಣೆ ಸಂಭವಿಸಿರಲಿಲ್ಲ. ಅರಣ್ಯ ಕಾಯ್ದೆಗೆ ಅನುಸಾರವಾಗಿಯೇ ಎಕರೆಗೆ ಒಂದೆರಡಂತಿದ್ದ 'ಧೂಪದ ಮರಗಳ'ನ್ನು ಮಾತ್ರ ತೆಗೆದಿದ್ದರು. ಆದರೆ ಗುಮ್ಮಾಡಲು ಹಕ್ಕಿ ಜೀರ್ಣಾಂಗಗಳ ರಚನೆ ಮಿಲಯಗಟ್ಟಲೆ ವರ್ಷಗಳಿಂದ ಈ ಮರದ ಹಣ್ಣನ್ನೇ ತಿಂದು ಸಂಪೂರ್ಣ ಅದಕ್ಕೇ ಒಗ್ಗಿದ್ದು ಅರಣ್ಯ ಇಲಾಖೆಯವರಿಗಾಗಲೀ, ಮರ ಕಡಿಯುವರಿಗಾಗಲೀ ಗಮನಕ್ಕೇ ಬರುವುದು ಹೇಗೇ? ಬೇರೆ ಯಾವ ಆಹಾರವನ್ನೂ ಅವು ಬಳಸುವುದು ಸಾಧ್ಯವೇ ಇಲ್ಲದ ಪ್ರಯುಕ್ತ ಕಾಡಿನಲ್ಲಿ ತೆಗೆದ ಮರಗಳು ಎಕರೆಗೆ ಒದೆರೆಡೇ ಆದರೂ ಅದು ಇಡೀ ಒಂದು ಪಕ್ಷಿಸಂಕುಲವೇ ಅಲ್ಲಿಂದ ನಿರ್ಗಮಿಲು ಕಾರಣವಾಯ್ತು (ಪೂರ್ಣಚಂದ್ರ ತೇಜಸ್ವಿ,ಪ್ರದೀಪ ಕೆಂಜಿಗೆ, 1993).

## 9. ಸಸ್ಯ ಸಂಕುಲ

ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳಲ್ಲಿ 7402 ಜಾತಿಯ ಹೂ ಗಿಡಗಳನ್ನು ಗುರುತಿಸಲಾಗಿದೆ. ಇದರಲ್ಲಿ 5588 ಜಾತಿಗಳು ಸ್ಥಳೀಯ ಅಥವಾ ಭಾರತೀಯವೆಂದೂ, 376 ಜಾತಿಗಳು ವಿದೇಶದ ಸಸಿಗಳೆಂದೂ ಗುರುತಿಸಲಾಗಿದೆ. 1438 ಜಾತಿಗಳನ್ನು ಅಲಂಕರಣ ಗಿಡಗಳೆಂದು ನೆಡಲಾಗಿದೆ. ಭಾರತೀಯ ಸಸ್ಯಗಳೆಂದು ಗುರುತಿಸುವ 2253 ಜಾತಿಗಳಲ್ಲಿ 1273 ಜಾತಿಗಳು ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳ ಮೂಲದವು ಎಂದು ಗುರುತಿಸಲಾಗಿದೆ. ಇದರಲ್ಲಿ 593 ಗಿಡಗಳು ಮುಖ್ಯ ಜಾತಿಯ ಉಪವರ್ಗದ್ದೆಂದು ಗುರುತಿಸಲಾಗಿದೆ. ಇದರಲ್ಲಿ 66 ಜಾತಿಗಳು, 5 ಉಪಜಾತಿಗಳು ಮತ್ತು 14 ಭಗೆಗಳು ಈಗ ಇರುವುದು ಅನುಮಾನಾಸ್ಪದವಾಗಿದೆ. ಆದ್ದರಿಂದ ಹೂ ಬಿಡುವ ಸಸ್ಯಗಳ 8080 ವಿಷಗಳ ಪ್ರಮಾಣ ವರದಿಯಾಗಿದೆ.

ಕನ್ನಡದ ಹೆಸರಾಂತ ಸಸ್ಯ ವಿಜ್ಞಾನಿ ಬಿ.ಜಿ.ಎಲ್.ಸ್ವಾಮಿಯವರ ಅಭಿಪ್ರಾಯದಂತೆ (ಬಿ.ಜಿ.ಎಲ್.ಸ್ವಾಮಿ:, 1976) ಕನ್ನಡ ನಾಡಿನ ಪಶ್ಚಿಮ ಘಟ್ಟಗಳ ಅರಣ್ಯಗಳಲ್ಲಿ ಮತ್ತು ನಮ್ಮ ದಕ್ಷಿಣ ಭಾರತದ ಅರಣ್ಯಗಳಲ್ಲಿ, ವಿಫುಲವಾದ ಸಸ್ಯ ಸಂಪತ್ತು ನಿಕ್ಷೇಪದಂತೆ ಅಡಗಿದೆ. ಆದರೆ ನಮ್ಮಲ್ಲಿಯೇ ಇರುವ ಈ ಸಂಪತ್ತಿನ ಅರಿವು ನಮಗಿಲ್ಲ. ಈ ಸಸ್ಯ ಸಂಪತ್ತನ್ನು ನಮ್ಮ ಜೀವನಕ್ಕೆ ಸಮನ್ವಯಗೊಳಿಸಿಕೊಳ್ಳುವಲ್ಲಿ ನಾವು ವಿಫಲರಾಗಿದ್ದೇವೆ. ವಿದ್ಯಾರ್ಥಿಗಳಲ್ಲಿ ಇರುವ ಶಕ್ತಿ ಮರದ ಮರೆಯ ತೇಜದಂತೆ ಗೂಢವಾಗಿರುತ್ತದೆ. ಈ ಶಕ್ತಿಯನ್ನು ಜಾಗೃತಗೊಳಿಸುವ ಶಕ್ತಿಯನ್ನು ಶಿಕ್ಷಣ ಮಾಡುತ್ತಿಲ್ಲ. ಎರಡನೆಯದಾಗಿ ಇನ್ನೂ ಶೋಚನೀಯವಾದ ಪರಿಸ್ಥಿತಿಯೆಂದರೆ ಇಂದು ನಾವು ಉಪಯೋಗಿಸುವ ಅಲೋಪತಿ ಮಾತ್ರೆಗಳು, ಇಂಜಕ್ಷನ್ನುಗಳ ಮೂಲಕ ಮಾತೃಕೆ ದಕ್ಷಿಣ ಅಮೇರಿಕ ಮತ್ತು ಆಫ್ರಿಕಾದ ಕಾಡು ಮೇಡುಗಳು. ಇಂತಹ ಕಾಡುಗಳಲ್ಲಿ ಜೀವನ ಪೂರ್ತಿ ಸವೆಸಿ ಸಸ್ಯವಿಜ್ಞಾನಿಗಳು ಔಷಧೀಯ ಸಸ್ಯಗಳನ್ನು ಗುರುತಿಸಿಕೊಟ್ಟಿದ್ದಾರೆ. ಇಂತಹ ಗಿಡಮರಗಳ ಉಪಯೋಗವನ್ನು ಮೊದಲು ಕಂಡುಕೊಂಡವರು ಆಯಾ ಕಾಡುಗಳ ಮೂಲ ನಿವಾಸಿಗಳು. ತಲೆ ತಲಾಂತರಗಳಿಂದ ಇದನ್ನು ಅವರು ಅರಿತುಕೊಂಡಿರುತ್ತಾರೆ. ಅವರಿಂದ ಈ ಜ್ಞಾನವನ್ನು ಈಚಿನ ವಿಜ್ಞಾನಿಗಳು ಪಡೆದು, ಆಯಾ ಗಿಡ ಮರಗಳ ಸಂಗ್ರಹಕ್ಕಾಗಿಯೇ ತನು ಮನ ಧನಗಳನ್ನು ವ್ಯಯಿಸಿ ಅಂಥಹ ಸಸ್ಯಗಳನ್ನು ಸಂಶೋಧನೆಗೆ ಒದಗಿಸಿ ಕೊಟ್ಟಿರುತ್ತಾರೆ. ನಮ್ಮ ಕಾಡುಗಳಲ್ಲಿ ಇಂತಹ ಸಸ್ಯಗಳಿಲ್ಲವೇ ಎಂದು ಪ್ರಶ್ನಿಸಿದರೆ ಇದೆ ಇಂದೂ ಧೈರ್ಯವಾಗಿ ಹೇಳುವಂತಿಲ್ಲಾ ಇಲ್ಲಾ ಎಂದೂ ಹೇಳುವಂತಿಲ್ಲ ಎಂಬ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಸಸ್ಯ ಸಂಗ್ರಹಕ್ಕಾಗಿಯೇ ಕಾಡುಗಳನ್ನು ಅಲೆದಾಡಿದಂಥ ವಿಜ್ಞಾನಿಗಳು ನಮ್ಮಲ್ಲಿ ಕಳೆದ ಶತಮಾನದವರೆಗೂ ದೊರಕುವ ಹೆಸರುಗಳೆಯೆಂದರೆ ರಾಕ್ಸ್ ಬರ್ಗ್, ವೈಟ್, ಕುಕ್, ಗ್ಯಾಂಬಲ್ ಮೊದಲಾದ ಒಂದು ಹತ್ತು ಮಂದಿ. ಇಂದಿನವರೆಗೆ ಇವರೊಂದಿಗೆ ಸರಿದೂಗುವಂಥಹ ಭಾರತೀಯ ಹೆಸರುಗಳಾವವೂ ನಮ್ಮಲ್ಲಿಲ್ಲವೆಂಬುದು ವ್ಯಸನದ ಸಂಗತಿ.

ನಮ್ಮ ಪ್ರಾಚೀನ ಕಾಲದಲ್ಲಿ ದೊರಕುವ ಚರಕ, ಶುಶೃತ, ವಾಗ್ಬಟ ಮೊದಲಾದವರ ಗ್ರಂಥಗಳಲ್ಲಿ ಅನೇಕ ಗಿಡಗಳು ಮತ್ತು ವ್ಯಾಧಿಗಳ ಹೆಸರುಗಳಿವೆ. ವ್ಯಾಧಿಗಳಿಗೆ ಔಷಧ ರೂಪಕವಾದ ಪ್ರಯೋಗಗಳಿವೆ. ಆದರೆ ಆ ಗಿಡಮೂಲಿಕೆಗಳಾವುವು? ಎಲ್ಲಿ ಬೆಳೆಯುತ್ತವೆ? ಇವು ಹೇಗಿರುತ್ತವೆ? ಅವುಗಳನ್ನು ಗುರುತು ಹಿಡಿಯುವ ಬಗೆ ಯಾವುದು? ಎಂಬುದು ಇಂದಿನವರಿಗೆ ಕಗ್ಗಂಟಾಗಿದೆ. ಮೇಲೆ ಉದಾಹರಿಸಿರುವ ಗ್ರಂಥಕಾರರು ಅವರ ಕಾಲಮಾನದಲ್ಲಿ ಬಳಕೆಯಲ್ಲಿದ್ದ ರೋಗಗಳನ್ನು ಮಾತ್ರ ಅವರು ಹೆಸರಿಸಿದರು. ಆದರೆ ಒಂದು ಸಾವಿರ ವರ್ಷಗಳ ನಂತರ ನಮ್ಮ ಕಾಲಮಾನದಲ್ಲಿ ಅನೇಕ ರೋಗಗಳು ವೃದ್ಧಿಯಾಗಿವೆ. ಇಂದು ನಮಗೆ ಎಲ್ಲಾ ಸೌಕರ್ಯಗಳಿದ್ದರೂ ಹಳೆಯದನ್ನು ಕಾಲಕ್ಕೆ ತಕ್ಕಂತೆ ಪರಿಶೋಧಿಸಬೇಕೆಂಬ ಹಂಬಲ, ಹೊಸತನ್ನು ಕಂಡು ಹಿಡಿಯಬೇಕೆಂಬ ಕುತೂಹಲವಾಗಲಿ ನಮಗೆ ಇರುವಂತಿಲ್ಲ ಎಂಬ ಖೇಧ ವ್ಯಕ್ತಪಡಿಸುತ್ತಾರೆ.

**ಬಿ.ಜಿ.ಎಲ್ ಸ್ವಾಮಿಯವರ ಉಲ್ಲೇಖದ ಪ್ರಕಾರ 18 ಮತ್ತು 19ನೇ ಶತಮಾನಗಳಲ್ಲಿ ಪಶ್ಚಿಮ ಘಟ್ಟಗಳ ಕಾಡುಗಳನ್ನು ವೈಜ್ಞಾನಿಕ ಸಂಶೋಧನೆ ನಡೆಸಿರುವ ವಿಜ್ಞಾನಿಗಳೆಂದರೆ:**

18 ಮತ್ತು 19ನೇ ಶತಮಾನಗಳಲ್ಲಿ ನಮ್ಮ ನಾಡಿನ ಸಸ್ಯ ಸಂಗ್ರಹಕ್ಕೆ ಕೊಡುಗೆ ನೀಡಿದವರಲ್ಲಿ ಹವ್ಯಾಸಿಗರೇ ಹೆಚ್ಚು:

**ಅ.** ಗ್ಯಾಂಬಲ್ ಎಂಬಾತ 'Flora of the Madras Presidency' ಎಂಬ ಗ್ರಂಥದ ಕೊನೆಯಲ್ಲಿ ವೈಜ್ಞಾನಿಕ ದೃಷ್ಟಿಯಿಂದ ಸಸ್ಯಸಂಗ್ರಹಣೆ ನಡೆದಿರುವ ಪ್ರದೇಶಗಳೆಂದು ದಕ್ಷಿಣ ಭಾರತದ ಪೂರ್ವ-ಪಶ್ಚಿಮ ತೀರಗಳ (ಮೈಸೂರಿನಿಂದ ಮದ್ರಾಸು ಭಾಗದ ಕಾಡುಗಳು) ನಡುವಣ ಪ್ರದೇಶದ ಸಸ್ಯ ಒಳಗೊಂಡಿದ್ದನ್ನು ಸೂಚಿಸುತ್ತಾನೆ. ಮೈಸೂರಿನ ಪಶ್ಚಿಮ ಘಟ್ಟದ ಕಾಡಿನ ಯಾವ ಸಸ್ಯಗಳ ಹೆಸರೂ ಇಲ್ಲಿ ಸೂಚಿತವಾಗಿಲ್ಲ. ಆದ್ದರಿಂದ 1900ರವರೆಗೆ ಪಶ್ಚಿಮ ಘಟ್ಟಗಳ ಕಾಡಿನ ಸಸ್ಯಶಾಸ್ತ್ರೀಯ ಅನ್ವೇಷಣೆ ನಡೆದಿಲ್ಲವೆಂದು ಬಿ.ಜಿ.ಎಲ್.ಸ್ವಾಮಿ ಅಭಿಪ್ರಾಯಪಡುತ್ತಾರೆ.

**ಆ.** ಫೈಸನ್ ತನ್ನ ಸ್ವಂತ ಖರ್ಚಿನಲ್ಲಿ ತಯಾರಿಸಿದ 'South Indian Hill Tops' (1930) ಎಂಬ ಗ್ರಂಥ ಮಹತ್ವ ಪೂರ್ಣವಾದುದು. ಇಂದಿಗೂ ನೀಲಗಿರಿ ಮತ್ತು ಪಳನಿ ಮೇಲ್ಮಲೆಗಳ ಸಸ್ಯಗಳನ್ನು ಅರಿಯಬೇಕಾದರೆ ಈ ಗ್ರಂಥದ ನೆರವು ಅತ್ಯಗತ್ಯ. ಹತ್ತು ಸಾವಿರ ಸಸಿಗಳ ವಿವರಣೆ ಇಲ್ಲಿದೆ.

**ಇ.** ಬಾರ್ನಿಸ್ ನು 'Flora of Madras City and Its Neighbourhood' ಎಂಬ ಗ್ರಂಥಕ್ಕೆ ಎರಡನೆ ಭಾಗ ಪ್ರಕಟಿಸಿದ.

ಇವರಲ್ಲಿ ವೈಟ್ ಎಂಬಾತ ವೃತ್ತಿಯಿಂದ ವೈದ್ಯ. ಗ್ಯಾಂಬಲ್ ಅರಣ್ಯ ಇಲಾಖೆಯಲ್ಲಿ ಅಧಿಕಾರಿ. ಟ್ರಾಂಕ್ವೆಬಾರ್ ಸಹೋದರರು ಕ್ರೈಸ್ತ ಮಿಷಿನರಿಗಳು, ಯೂಲ್ ಎಂಬಾತ ಈಸ್ಟ್ ಇಂಡಿಯಾ ಕಂಪನಿಯ ಸೈನ್ಯದಲ್ಲಿ ಅಧಿಕಾರಿ.

"ಕರ್ನಾಟಕ ರಾಜ್ಯ ಕೋಶ-1, ಸಸ್ಯ ಸಂಪುಟ"ದ ಉಲ್ಲೇಕದಂತೆ (ಸಿ.ಡಿ.ಪಾಟೀಲ್, 2001) ಬೆಂಜಮಿನ್ ಹೈನೆ ಎಂಬುವರು ಒಳಕರ್ನಾಟಕದ ದಕ್ಷಿಣ ಭಾಗದ ಸಸ್ಯಗಳನ್ನು ಸಂಗ್ರಹಿಸಿ (1812-1816) ಕರ್ನಾಟಕದ ಸಸ್ಯಾಭ್ಯಾಸಿಗಳಲ್ಲಿ ಮೊದಲಿಗರಾಗಿದ್ದಾರೆ. ಆದರೆ ಅವರು ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳ ಅಧ್ಯಯನ ನಡಿಸಿರುವಂತೆ ಕಂಡುಬರುವುದಿಲ್ಲ. 1850-1853 ರಲ್ಲಿ ಡೇವಿಡ್ ರಿಚೀ ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಗಿಡಗಳ ಸಂಗ್ರಹಣೆ ಮತ್ತು ಅಧ್ಯಯನ ನಡೆಸಿದ್ದಾರೆ ಎಂಬ ಉಲ್ಲೇಖವಿರುವುದರಿಂದ ಕರ್ನಾಟಕ ಭಾಗದ ಪಶ್ಚಿಮ ಘಟ್ಟದ ಪರ್ವತಗಳ ಕಾಡುಗಳ ಅಧ್ಯಯನ ನಡೆಸಿರುವವರಲ್ಲಿ ಮೊದಲಿಗರು ಎಂದು ಹೇಳಬಹುದು. ಹಾಗೆಯೇ ಜೆ.ಎಸ್.ಲಾ ಮತ್ತು ಜೆ.ಎಸ್. ಸ್ಟಾಕ್ಸ್ ರು ಉತ್ತರ ಕನ್ನಡ, ಬೆಳಗಾವಿ ಮತ್ತು ಬಾಬಾಬುಡನ್ ಪರ್ವತ ಶ್ರೇಣಿಗಳಲ್ಲಿ ಸಸ್ಯ ಸಂಗ್ರಹಣೆ ನಡೆಸಿದ್ದಾರೆ. 19ನೇ ಶತಮಾನದ ಕೊನೆಯ ವೇಳೆಗೆ Beddome, Lawson, Gamble ರು ಬಳ್ಳಾರಿ, ದಕ್ಷಿಣ ಕನ್ನಡ, ಕೊಡಗು (ಮದರಾಸು ಪ್ರಸಿಡೆನ್ಸಿ) ಗಳಲ್ಲಿ ಸಸ್ಯಸಂಗ್ರಹ ನಡೆಸಿದ್ದಾರೆ ಎಂಬ ಉಲ್ಲೇಖವಿದೆ. ಫಿಚರ್ 1905-1907ರಲ್ಲಿ ಬಿಳಿಗಿರಿ ರಂಗನ ಬೆಟ್ಟಗಳಿಂದ, 1908-1909 ರಲ್ಲಿ ಬಾಬಾಬುಡನ್ ಬೆಟ್ಟ, ಹಾಸನ ಮತ್ತು ಕೊಡಗುಗಳಿಂದ ಸಸ್ಯ ಸಂಗ್ರಹಿಸಿದ್ದಾರೆ. ಕನ್ನಡಿಗರು ಕರ್ನಾಟಕದ ಐದು ಜಿಲ್ಲೆಗಳ ಸಸ್ಯಗಳ ಶಾಸ್ತ್ರೀಯ ಅಧ್ಯಯನ ನಡೆಸಿದ್ದಾರೆಂಬ ಉಲ್ಲೇಖ ಇಲ್ಲಿ ಕಾಣಬಹುದಾದರೂ, ಪಶ್ಚಿಮಘಟ್ಟದ ಕಾಡುಗಳ ಅಧ್ಯಯನವನ್ನು ಈ ಗ್ರಂಥದಲ್ಲಿ ಕಂಡುಬರುವಂತೆ ಯಾರು ನಡೆಸಿರುವಂತಿಲ್ಲ.

## 10. ಜೀವ ವೈವಿಧ್ಯತೆಯ ರಕ್ಷಣೆ

"ಜೀವ ವೈವಿಧ್ಯತೆ" ಎಂದರೆ ಜೀವಿಗಳನ್ನು ಸಸ್ಯಗಳು ಮತ್ತು ಪ್ರಾಣಿಗಳು ಎಂದು ಎರಡು ಪ್ರಭೇದಗಳಾಗಿ ವಿಂಗಡಿಸುವುದು ಡಬ್ಲ್ಯುಯು. ಈ ರೋಸನ್ (1985) ಎಂಬುವನು ಈ ಪದವನ್ನು ಮೊತ್ತಮೊದಲು ಜೀವ ಸಂಕುಲದ ವೈವಿಧ್ಯತೆಯನ್ನು ಗುರುತಿಸಲು ಬಳಸಿದ್ದು 1986ರಲ್ಲಿ ಯು.ಎನ್.ಓ. ಇದನ್ನು ಒಪ್ಪಿಕೊಂಡು ಬಳಸತೊಡಗಿತು. 1992ರ "Nations Earth Summit" ನಲ್ಲಿ ಈ ಪದವನ್ನು ಜೀವ ಸಂಕುಲದ ಎಲ್ಲ ರೀತಿಯ ವೈವಿಧ್ಯತೆಯನ್ನೂ ಸೂಚಿಸಲು ಬಳಸುವ ನಿರ್ಧಾರ ಮಾಡಲಾಯಿತು.

"The IUCN Red list of Threatened Species created on 1963, is the World's most comprehensive inventory of global conservation of nature and national resources. (IUCN) is the world's main authority on the conservation states of species. The IUCN Red list is set upon precise criteria to evaluate the extinction risk of thousands of species and subspecies.

The 2006 Red list released on 4th May 2006 evaluated 40,168 species asa wholes plus an additional 2,160 sub species, varieties, aqutic stocks and subpopulations, From the species evaluated as a whole, 16,118 were considered threatened, of these 7,725 were animals, 8390 were plants and three were lichen and mushrooms (Rajeev, 2009)

ಇತಿಹಾಸದಿಂದ ಪಶ್ಚಿಮ ಘಟ್ಟದ ಪರ್ವತಗಳು ತನ್ನ ಭೀಕರ ಕಾಡುಗಳಿಂದಾಗಿ ಸ್ವಯಂ ಸಂರಕ್ಷಿತವಾಗಿ ಉಳಿದು ಬಂದಿದೆ. ಈ ಕಾಡುಗಳು ಇಲ್ಲಿಯ ಗುಡ್ಡಗಾಡುಗಳ ಜನರಿಗೆ ಕಾಡುಗಳ ಸಂಪದ್ಭರಿತ ಫಲಗಳನ್ನೂ ಮತ್ತು ನೈಸರ್ಗಿಕ ಪೋಷಣೆಯನ್ನೂ ನೀಡುತ್ತಾ ಬಂದಿದೆ. ಸದಾ ತೇವಾಂಶಭರಿತ ಈ ಮಳೆಕಾಡುಗಳು ಅಭೇಧ್ಯವಾದ ದುರ್ಗಮತೆಯ ತಾಣಗಳಾಗಿದ್ದು ದಕ್ಕನ್ ಪ್ರಸ್ಥಭೂಮಿಯ ಜನರಿಗೆ ವ್ಯವಸಾಯಕ್ಕಾಗಲೀ, ವಾಸಯೋಗ್ಯವನ್ನಾಗಿ ಮಾಡಲಾಗಲೀ ಅಸಾಧ್ಯವಾಗಿದ್ದಿತು. ಬ್ರಿಟೀಷರು ಭಾರತವನ್ನು ಪ್ರವೇಶಿಸಿದ ನಂತರ (ಕ್ರಿ.ಶ.1860-1950ರವರೆಗೆ) ಈ ಪ್ರದೇಶಗಳನ್ನು ವ್ಯವಸಾಯಕ್ಕೆ ಯೋಗ್ಯಗೊಳಿಸಿ ಮುಖ್ಯವಾಗಿ ಕಾಫಿ, ಟೀ ಮತ್ತು ತೇಗ ಮರಗಳ ತೋಟಗಳನ್ನು ಬೆಳೆಸಲಾರಂಭಿಸಿದರು. ಆದರೆ, ಇಂತಹ ವ್ಯವಸಾಯ ಪದ್ಧತಿಗಳಿಂದ ಈ ಸ್ಥಳಗಳಲ್ಲಿದ್ದ ಅಪರೂಪವಾದ, ಸ್ಥಳೀಯ "ವಿಷಯ ತಜ್ಞರುಗಳು" ಅಳಿದು ಹೋಗಲು ಕಾರಣವಾಯಿತು. ಸದಾ ತೇವಾಂಶಭರಿತ ಮಳೆಕಾಡುಗಳಲ್ಲಿದ್ದ ಜಟಿಲ ವೈವಿಧ್ಯಮಯ ಜೀವಸಂಕುಲಗಳೂ

ಇದರಿಂದ ಅಪಾಯದ ಅಂಚನ್ನು ತಲುಪಲು ಕಾರಣವಾಯಿತು (Ajith Kumar, Impact of rainforest fragmentation on small mammals and herpetofauna in the Western Ghats, South India)

"ಉಷ್ಣವಲಯದ ಹವಾಗುಣ ಅರಣ್ಯಾಭಿವೃದ್ಧಿಗೆ ಅನುಕೂಲಕರ. ಸಾಕಷ್ಟು ಸೂರ್ಯಶಕ್ತಿ ದೊರೆಯುವುದರಿಂದ ಸಸ್ಯ ಬೆಳವಣಿಗೆಗೆ ಮಹತ್ವಾದ್ದಾದ ಧ್ಯುತಿ ಸಂಶ್ಲೇಷಣೆ ಕ್ರಿಯೆಗೆ ಇಲ್ಲಿ ಅವಧಿ ಜಾಸ್ತಿ ಲಭಿಸುತ್ತದೆ. ಒಳ್ಳೆಯ ಬಿಸಿಲು, ಮಳೆ, ಆದ್ರತೆ ಮರ ಬೆಳವಣಿಗೆಯಲ್ಲಿ ಪರಿಣಾಮ ಬೀರಿವೆ. ನಾಟಾ ಗುಣಮಟ್ಟಕ್ಕೂ ಇವುಗಳ ಪರಿಣಾಮವಿದೆ. ಹೀಗಾಗಿ ವೈವಿಧ್ಯಮಯ ಸಸ್ಯ ಖಜಾನೆ ಈ ಪ್ರದೇಶದಲ್ಲಿದೆ. ಗಾಳಿ, ಮಳೆಯಿಂದ ಭೂ ಸವಕಳಿ ಈ ಪ್ರದೇಶದ ದೊಡ್ಡ ಸಮಸ್ಯೆ. ನಾಟಾ, ಪದರುಕಟ್ಟಿಗೆ, ತಿರುಳುಕಟ್ಟಿಗೆ, ಇದ್ದಿಲು, ಉರುವಲು, ಸ್ಥಳಾಂತರ ಬೇಸಾಯ, ನಗರ ವಿಸ್ತರಣೆ, ಕೈಗಾರಿಕಾಭಿವೃದ್ಧಿ, ಮೇವು, ಗೊಬ್ಬರ, ಕಾಡ್ಗಿಚ್ಚುಗಳಿಂದ ಅರಣ್ಯ ನಾಶ ನಿರಂತರವಾಗಿದೆ. ಕ್ರಿ.ಶ.16ನೇ ಶತಮಾನದಲ್ಲಿ ಮಾನವ ನಿರ್ಮಿತ ತೋಪು ಉಷ್ಣವಲಯದಲ್ಲಿ ಉದಯವಾಯಿತು. ಯುರೋಪಿಯನ್ ಪ್ರಭಾವದಿಂದ ಈ ಜ್ಞಾನ ಜಗತ್ತಿಗೆ ವಿಸ್ತರಿಸಿತು. ಕ್ರಿ.ಶ.1680ರಲ್ಲಿ ಶ್ರೀಲಂಕಾದಲ್ಲಿ ತೇಗದ ತೋಟವನ್ನು ಓರ್ವ ಡಚ್ ವ್ಯಕ್ತಿ ಯಶಸ್ವಿಯಾಗಿ ನಿರ್ಮಿಸಿದನು. ಉಷ್ಣವಲಯ ವಸಾಹತುಶಾಹಿಯ ನೆಲೆಯಾದಂತೆ ಕ್ರಮೇಣ ಸಸ್ಯಶಾಸ್ತ್ರದ ಬೆಳವಣಿಗೆಯಾಯಿತು. ಭಾರತದ ಸಂದರ್ಭದಲ್ಲಿ ಕ್ರಿ.ಶ.1840ರಲ್ಲಿ ನೀಲಂಬೂರಿನ ಗುಡ್ಡದಲ್ಲಿ ತೇಗದ ಪ್ರಥಮ ತೋಪು, ನಂತರ ಮೈಸೂರಿನ ನಂದಿ ಬೆಟ್ಟದಲ್ಲಿ, ಕ್ರಿ.ಶ. 1790ರಲ್ಲಿ ನೀಲಗಿರಿ, ಕ್ರಿ.ಶ.1832ರಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ಅಕೇಶಿಯಾ ಮುಖೇನ ಮೋನೋಕಲ್ಚರ್ ಪ್ರಭಾವಲಯ ವಿಸ್ತರಿಸತೊಡಗಿತು (ಶಿವಾನಂದ ಕಳವೆ, 2003)

ನಾರಮನ್ ಮೇಯರ್ಸ್ ಎಂಬ ಪರಿಸರವಾದಿ ಇಲ್ಲಿಯ ಅತ್ಯಂತ ಅಪರೂಪದ ನಾಜೂಕಾದ ಜೀವವೈವಿಧ್ಯತೆಯ ಮೇಲೆ ಬೆಳಕು ಚೆಲ್ಲಿದ ನಂತರ 1988ರಲ್ಲಿ ಈ ಪಶ್ಚಿಮ ಘಟ್ಟದ ಪರ್ವತಗಳನ್ನು ಸಂರಕ್ಷಿತ ಅಭಯಾ ಅರಣ್ಯಗಳೆಂದು ಘೋಷಿಸಲಾಯಿತು. ಪಶ್ಚಿಮ ಘಟ್ಟದ ಪರ್ವತಗಳು ಭಾರತದ ಒಟ್ಟು 5% ಜಾಗವನ್ನು ಆವರಿಸಿದ್ದರೂ ಭಾರತದಲ್ಲಿ ಕಂಡುಬರುವ ದೊಡ್ಡ ಸಸ್ಯ ಸಂಕುಲಗಳಲ್ಲಿ 27% (ಅಂದರೆ 15,000 ಜಾತಿಗಳಲ್ಲಿ 4,000 ಜಾತಿಗಳು) ಈ ಪರ್ವತ ಶ್ರೇಣಿಗಳಲ್ಲಿ ಕಂಡುಬರುತ್ತದೆ. ಇದರಲ್ಲಿ 1800 ಜಾತಿಗಳು ಇಲ್ಲಲಿಯ ಸ್ಥಳೀಯ ಜಾತಿಗಳಾಗಿವೆ. **ಪಶ್ಚಿಮ ಘಟ್ಟದ ಪರ್ವತಗಳಲ್ಲಿ ಕಂಡುಬರುವ 84 ಜಾತಿಯ ಉಭಯಚರಿಗಳೂ, 16 ಪಕ್ಷಿಜಾತಿಗಳೂ, 7 ಬಗೆಯ ಸರಿಸೃಪಗಳೂ, ಮತ್ತು 1600 ಹೂಗಿಡಗಳ ಜಾತಿಗಳೂ ಪ್ರಪಂಚದ ಬೇರಾವ ಭಾಗದಲ್ಲೂ ಕಂಡುಬರುವುದಿಲ್ಲ.** ಆದ್ದರಿಂದ ಭಾರತ ಸರ್ಕಾರ 13 ರಾಷ್ಟ್ರೀಯ ಅಭಯಾರಣ್ಯಗಳನ್ನು ನಿರ್ಮಿಸಿ ಜನರ ಪ್ರವೇಶವನ್ನು ಇಲ್ಲಿ ನಿರ್ಭಂಧಿಸಿದೆ. ಸಂರಕ್ಷಿತ ವನ್ಯಧಾಮಗಳನ್ನು ನಿರ್ಮಿಸಿ ಅಪಾಯದ ಅಂಚಿನಲ್ಲಿರುವ ಕೆಲವು ಸಸ್ಯ ಮತ್ತು ಪ್ರಾಣಿಗಳ ಪ್ರಭೇಧಗಳನ್ನು ನಿರ್ಭಂಧಿಸಲು ಸರ್ಕಾರ ಯೋಜನೆಗಳನ್ನು ಹಾಕಿಕೊಂಡು ಪ್ರಯತ್ನಿಸುತ್ತಿದೆಯಾದರೂ ಕೆಲವು ಸೂಕ್ಷ್ಮ ಪರಿಸರಗಳು ಇನ್ನೂ ಅಪಾಯದ ಅಂಚಿನಲ್ಲಿ ಉಳಿದುಕೊಂಡಿವೆ.

**ಭಾರತ ಸರ್ಕಾರದಿಂದ ಸಂರಕ್ಷಿತವಾಗಿರುವ ಪಶ್ಚಿಮ ಘಟ್ಟದ ಪರ್ವತಗಳ ಅಭಯಾರಣ್ಯಗಳೆಂದರೆ:**

1. ನೀಲಗಿರಿಯ ಜೈವಿಕ ಮಂಡಲ (5500 ಕಿ.ಮೀ.)
2. ನಾಗರಹೊಳೆ ನಿತ್ಯ ಹರಿದ್ವರ್ಣದ ಕಾಡುಗಳು (ಕರ್ನಾಟಕ)
3. ಬಂಡಿಪುರದ ಎಲೆ ಉದುರುವ ಕಾಡುಗಳು (ಕರ್ನಾಟಕ)
4. ವೈನಾಡು ಮತ್ತು ಮುಕೃತಿ (ಕೇರಳ)
5. ಮಧುಮಲೈ ಅಭಯಾರಣ್ಯ (ತಮಿಳು ನಾಡು)
6. ಸತ್ಯಮಂಗಲ (ತಮಿಳು ನಾಡು)

ಈ ದಿಸೆಯಲ್ಲಿ ಕೇರಳಾದ ಸೈಲೆಂಟ್ ವ್ಯಾಲಿ ಉಷ್ಣವಲಯದ ನಿತ್ಯ ಹರಿದ್ವರ್ಣದ ಕಾಡುಗಳ ಮೂಲ ಲಕ್ಷಣಗಳನ್ನು ಕಳೆದುಕೊಂಡಿದೆ.

## 11. ಪಶ್ಚಿಮ ಘಟ್ಟ ಕಾಡುಗಳ ರಕ್ಷಣೆ

1986ರಲ್ಲಿ ಭಾರತ ಸರ್ಕಾರ ಪಶ್ಚಿಮ ಘಟ್ಟದ ಪರ್ವತಗಳ 56,825 ಕಿ.ಮೀ. ಪ್ರದೇಶವನ್ನು ಸೂಕ್ಷ್ಮ ಪರಿಸರ ಪ್ರದೇಶವೆಂದು ಗುರುತಿಸಿತು. ಪರಿಸರ ಮತ್ತು ಅರಣ್ಯ ಖಾತೆ ಸಚಿವರು 1986 ಮಾರ್ಚ್ 10 ರಂದು ಹೊರಡಿಸಿದ ಪ್ರಕಟಣೆ ಭಾರತದ ಇತಿಹಾಸದಲ್ಲೇ ಅತೀ ದೊಡ್ಡ ಪ್ರದೇಶವನ್ನೂ ಒಳಗೊಂಡಿದ್ದಾಗಿದ್ದಿತು. ಆದರೆ ಈ ಪ್ರಕಟಣೆ ಕೇರಳಾ ರಾಜ್ಯ ಗುರುತಿಸಿದ್ದ ಕೆಲವು ಪ್ರದೇಶವನ್ನೂ ಕೈ ಬಿಟ್ಟಿದ್ದಿತು.

2010ರಲ್ಲಿ ಪರಿಸರ ಖಾತೆ ಸಚಿವರಾದ ಜಯರಾಮ್ ರಮೇಶ್ ಪಶ್ಚಿಮ ಘಟ್ಟದ ಪರ್ವತಗಳ ಪರಿಸರ ತಜ್ಞರ ಸಮಿತಿ () ಯನ್ನು ಪರಿಸರವಾದಿ ಮಹಾದೇವ್ ಗಾಡ್ಗಿಲ್ ರ ನೇತೃತ್ವದಲ್ಲಿ ರಚಿಸಿತು. ಈ ಸಮಿತಿ ಪಶ್ಚಿಮ ಘಟ್ಟದ ಪರ್ವತಗಳ ಸಂಪೂರ್ಣ ಪ್ರದೇಶವನ್ನು ಸೂಕ್ಷ್ಮ ಪರಿಸರ ಪ್ರದೇಶವೆಂದು ನಿರ್ಧರಿಸಿದ್ದು ಅದರ ಸೂಕ್ಷ್ಮತೆಯನ್ನಾಧರಿಸಿ ಮೂರು ವಲಯಗಳನ್ನಾಗಿ ಗುರುತಿಸಿತು. ಇದು ಆರೂ ರಾಜ್ಯಗಳಲ್ಲಿ, ಮುಖ್ಯವಾಗಿ ಕೇರಳದಲ್ಲಿ ಚರ್ಚೆಗೆ ಕಾರಣವಾದ್ದರಿಂದ ಭಾರತ ಸರ್ಕಾರ ಯೋಜನಾ

ಆಯೋಗದ ಮುಖ್ಯಸ್ಥರಾದ ಕಸ್ತೂರಿ ರಂಗನ್ ನೇತೃತ್ವದಲ್ಲಿ ಮತ್ತೊಂದು ಸಮಿತಿಯನ್ನು ರಚಿಸಿ ಮಹಾದೇವ ಗಾಡ್ಗಿಲ್ ರ ಸಮಿತಿಯ ವರದಿಯನ್ನು ಪರಿಶೀಲಿಸಲು ನೇಮಿಸಿತು. ಮಹಾದೇವ್ ಗಾಡ್ಗಿಲ್ ಸಮಿತಿಯ ವರದಿ ಅತೀ ಪರಿಸರವಾದಿ ಎಂಬ ಟೀಕೆಗೆ ಗುರಿಯಾದರೆ, ಕಸ್ತೂರಿ ರಂಗನ್ ವರದಿ ಪರಿಸರ ವಿರೋಧಿ ಎಂಬ ಟೀಕೆಗೆ ಗುರಿಯಾಯಿತು.

## ಇತ್ತೀಚಿನ ಪ್ರಯತ್ನಗಳು

ಯು.ಪಿ.ಎ. ಸರ್ಕಾರದ ಎರಡನೇ ಅವಧಿಯಲ್ಲಿ ಮೂರನೇ ಪರಿಸರ ಖಾತೆ ಸಚಿವರಾದ ವೀರಪ್ಪ ಮೊಯಿಲಿ ಚುನಾವಣಾ ನೀತಿ ಸಂಹಿತೆಯು ಜಾರಿಗೊಳ್ಳುವ ಹಿಂದಿನ ದಿನ ಹೊರಡಿಸಿದ ಆದೇಶ ಈ ರೀತಿ ಇದೆ:

Government of India, Ministry of Environment and Forests Notification New Delhi, 10th March, 2014 S.O. 733 (E) – The following draft of the notification:

"And whereas, taking into account the ESA demarcated by Kerala Government for the state of Kerala instead of Ecologocally Sensitive Area recommended by high level working group for the state, the total ecologically sensitive Aria for Western Ghars region works out.

Therefore, in exercise of the powers conferred be section 3 of the Environment (Protection Act, 1986 (29 of 1986) and sub-rule 5 of the Environment (protection) Rules, 1986, The Central Government here by notified the identified area of 56,825 sq km. Which is spread across six states namely Gujarath, Maharastra, Goa, Karnatraka, Kerala and Tamil Nadu as the Western Ghars Ecologically Sensitive Area (here is afer referred to as the Eco-Sensitive Area)"

2015ರಲ್ಲಿ ಪರಿಸರ ಖಾತೆ ಸಚಿವರಾದ ಜಯಂತಿ ನಟರಾಜನ್ 1913ರಲ್ಲಿ ಕಸ್ತೂರಿ ರಂಗನ್ ವರದಿಯ ಎಲ್ಲ ಸಲಹೆಗಳನ್ನೂ ಜಾರಿಗೊಳಿಸುವ ನಿರ್ಣಯವನ್ನು ಕೈಗೊಂಡರು. ಕೇರಳದ ಪ್ರತಿಭಟನೆಯನ್ನು ಗುರುತಿಸಿ ವ್ಯವಸಾಯ ಮತ್ತು ತೋಟಗಾರಿಕೆಗೆ ಯಾವುದೇ ನಿರ್ಭಂಧವನ್ನು ವಿಧಿಸುವುದಿಲ್ಲವೆಂದು ಸ್ಪಷ್ಟಪಡಿಸಿದರು. ಆದರೆ ಈ ಆಶ್ವಾಸನೆ ಕೇರಳದ ಬಲಿಷ್ಠರನ್ನು ತೃಪ್ತಿಪಡಿಸಲಿಲ್ಲವಾದ್ದರಿಂದ ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಪಕ್ಷಗಳು ಕೇಂದ್ರದ ಮೇಲೆ ಒತ್ತಡವನ್ನು ತಂದು ಕಾನೂನಿಗೆ ಕೆಲವು ತಿದ್ದುಪಡಿಗಳನ್ನು ಮಾಡುವಂತೆ ಒತ್ತಾಯಿಸಿದವು. ಒತ್ತಡಕ್ಕೆ ಮಣಿದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸೂಕ್ಷ್ಮ ಪರಿಸರ ಪ್ರದೇಶದ ಗಡಿಯನ್ನು ಮರು ಪರಿಶೀಲಿಸುವ ಅವಕಾಸವನ್ನು ನೀಡಿತು.

ಆಗಸ್ಟ14, 2016ರಂದು ಕೇಂದ್ರ ಸಚಿವರಾದ (ರಾಜ್ಯ ಖಾತೆ) ಅನಿಲ್ ಮಾಧವ್ ದವೆ ಅವರು ಪಶ್ಚಿಮ ಘಟ್ಟಗಳ ಸರ್ಕಾರಿ ಅಧಿಕಾರಿಗಳು ಮತ್ತು ಎಂ.ಪಿ.ಗಳ ಒಂದು ಸಭೆಯನ್ನು ಕರೆದು ಪರಿಸರ ರಕ್ಷಣೆ ಮತ್ತು ಅಭಿವೃದ್ಧಿ ಎರಡರ ನಡುವೆ ಸಮತೋಲನ ಕಾಪಾಡಿಕೊಳ್ಳುವಂತೆ ತಿಳಿಸಿದರು.

'ದಿ ಹಿಂದೂ' ಪತ್ರಿಕೆಯ ವರದಿ (ನವೆಂಬರ್ 13, 2016) ಯ ಅನುಸಾರ "The Save Western Ghats Movement" ಎಂಬ ಆಂದೋಲನವೊಂದು ತಮಿಳುನಾಡಿನಲ್ಲಿ ರೂಪುಗೊಂಡಿದ್ದು, ಕುಮಾರ್ ಕಲಾನಂದ್ ಮಣಿ ಮತ್ತು ಪಾಂಡುರಂಗ ಹೆಗ್ಗಡೆ ಎಂಬ ಮುಂದಾಳುಗಳು ಅದರ ಸಭೆಯಲ್ಲಿ ಭಾಗವಹಿಸಿದ್ದರು. ಗಾಂಧಿ ಗ್ರಾಮ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಮುಕುಂದನ್ ಮತ್ತು ಕಲ್ಯದಾಸನ್ ಮಾತನಾಡಿ ಆ ಆಂದೋಲನ 1987ರಲ್ಲಿ ಅಸ್ತಿತ್ವಕ್ಕೆ ಬಂದಿತು ಎಂಬುದಾಗಿ ಹೇಳಿದ್ದರು. ಮಣಿಯವರು ಪಶ್ಚಿಮ ಘಟ್ಟಗಳ ಪ್ರವಾಸಿ ತಾಣಗಳು ಸ್ವೇಚ್ಛಾಪರವಾಗಿವೆ. ಅದು ಒಂದು ಸಭೆಯ ಮುಂದಾಳತ್ವದಲ್ಲಿ ನಡೆಯಬೇಕು ಎಂಬುದಾಗಿ ಅವರು ಹೇಳಿದ್ದರು.

ಹಿಂದೂಸ್ತಾನ್ ಟೈಮ್ಸ್ ನವೆಂಬರ್ 23, 2016ರಲ್ಲಿ ವರದಿ ಮಾಡಿರುವಂತೆ ಕೇಂದ್ರ ಸರ್ಕಾರ (Ministry of Environment, forest and climate change) "Mountain Policy" ಯನ್ನು ಜಾರಿಗೆ ತಂದಿದ್ದು ಹಿಮಾಲಯ ಪರ್ವತಗಳು ಮತ್ತು ಪಶ್ಚಿಮ ಘಟ್ಟಗಳ ಪರ್ವತಗಳು ಮತ್ತು ಅದರ ಜೀವವೈವಿಧ್ಯತೆಯನ್ನು ರಕ್ಷಿಸುವ ಉದ್ದೇಶವನ್ನು ಅದು ಒಳಗೊಂಡಿದೆ. ಕೇಂದ್ರ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ಆದ ಅಮಿತ್ ಪ್ರಸಾದ್ ಅವರು ತಿಳಿಸಿರುವಂತೆ "ಭಾರತ ದೇಶದ ಶೇ.24% ರಷ್ಟು ಭಾಗ ಪರ್ವತಗಳು ಆವೃತವಾಗಿರುವುದರಿಂದ ಪರ್ವತ ಪ್ರದೇಶಗಳ ಬೆಳವಣಿಗೆ ಸರಿಯಾಗಿ ಆಗಬೇಕೆಂಬ ಉದ್ದೇಶದಿಂದ ಮತ್ತು ಅವೈಜ್ಞಾನಿಕ ಬೆಳವಣಿಗೆಯನ್ನು ತಡೆಯುವ ಉದ್ದೇಶವನ್ನು ಕುರಿತು ನೀತಿ ಆಯೋಗ (Niti Ayog) ಬಹಳ ಕಾಲದಿಂದ ಇಂತಹ ಒಂದು ಯೋಜನೆಗೆ ಒತ್ತಾಯಿಸುತ್ತಿದ್ದು ಆ ಯೋಜನೆ ಇದೀಗ ಕಾರ್ಯೋನ್ಮುಖವಾಗಿದೆ."

ಟೈಮ್ಸ್ ಆಫ್ ಇಂಡಿಯಾದ ವರದಿಯನುಸಾರ "Tropical Conservation Science" ನಲ್ಲಿ ಸಂಶೋಧನಾ ತಜ್ಞರಾದ (1) ಜೀನ್ ಫಿಲಫ್ (-ಫೈರೇವುಡ್, ಸಿಲಿಗೂರು ನೇಚರ್ ಟ್ರಸ್ಟ್), (2) ಸಂಜಯ್ ಗುಬ್ಬಿ (-ಅರಣ್ಯ ಪ್ರಾಣಿಶಾಸ್ತ್ರಜ್ಞ), (3) ಪ್ರಿಯ ದವಿದಾರ್ (-ಪಾಂಡಿಚೆರಿ ವಿಶ್ವವಿದ್ಯಾಲಯ) (4) ಹೆಚ್.ಸಿ.ಪೂರ್ಣೇಶ್ (-ಪರಿಸರ ಸಂರಕ್ಷಣ ಪೌಂಡೇಷನ್) ಇವರುಗಳು ಪ್ರಕಟಿಸಿರುವ ಸಂಶೋಧನಾ ಪ್ರಬಂಧದ ವರದಿಯನುಸಾರ, ಇತ್ತೀಚಿನ 44 ವರ್ಷಗಳಲ್ಲಿ 16,00,000 ಎಕರೆ ಕಾಡಾನೆಗಳ ಅರಣ್ಯ ಪ್ರದೇಶವನ್ನು ಮನುಷ್ಯ ವ್ಯವಸಾಯಕ್ಕಾಗಿ, ಇತರ ಬಹು ಉಪಯೋಗಿ ಸಲಕರಣೆಗಳಿಗಾಗಿ ನಾಶಗೊಳಿಸಲಾಗಿದೆ. ಈ ಭೂ ಪ್ರದೇಶದ ವಿಸ್ತೀರ್ಣ ಬೆಂಗಳೂರಿನ 10ರಷ್ಟು ದೊಡ್ಡದಾಗಿದೆ. ಈ ಸಂಶೋಧನೆಯನ್ನು ಕೈಗೊಳ್ಳಲು ಸಂಶೋಧನಾ ತಜ್ಞರು 1960ರ ಸ್ಯಾಟಲೈಟ್ನ ಚಿತ್ರದೊಂದಿಗೆ ಇತ್ತೀಚಿನ ಭೂವಿಸ್ತೀರ್ಣದೊಂದಿಗೆ ತಾಳೆಹಾಕಿ ನೋಡಲಾಯಿತು. ಈ ಅರಣ್ಯನಾಶ "ಭದ್ರ ಹುಲಿ ಅಭಯಾರಣ್ಯ ಪ್ರದೇಶ" ಮತ್ತು "ನೀಲಗಿರಿ ಸಂರಕ್ಷಿತ ಅಭಯಾರಣ್ಯ ಪ್ರದೇಶ"ಗಳಲ್ಲಿ ಅತಿ

ಹೆಚ್ಚಾಗಿದೆ. ಈ ಭೂ ಪ್ರದೇಶಗಳು ಕರ್ನಾಟಕದ ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಹೆಚ್ಚಾಗಿದೆ. ಈ ಎರಡೂ ಜಿಲ್ಲೆಗಳಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಕಾಡಾನೆಗಳು ಮತ್ತು ಮನುಷ್ಯರ ನಡುವಿನ ಕಾದಾಟ ಹೆಚ್ಚಾಗಿದ್ದು ಕಳೆದ ಹತ್ತು ವರ್ಷಗಳಲ್ಲಿ 64 ಸಾವುಗಳು ಸಂಭವಿಸಿವೆ.

ಇತ್ತೀಚೆಗೆ ಬೆಂಗಳೂರಿನ ಉಚ್ಚ ನ್ಯಾಯಾಲಯದಲ್ಲಿ ವಕೀಲರಾದ ಗೀತಾ ಮಿಶ್ರ ಅವರು ಪಶ್ಚಿಮ ಘಟ್ಟಗಳ ಪರಿಸರ ಹಿತ ಸಂರಕ್ಷಣೆಯ ಪ್ರಾಧಿಕಾರವನ್ನು ರಚಿಸಲು (PIL) ಅರ್ಜಿ ಸಲ್ಲಿಸಿದ್ದಾರೆ. ಕೊಡಗಿನ ಪಶ್ಚಿಮ ಘಟ್ಟಗಳ ಅರಣ್ಯಗಳಲ್ಲಿ ಇತ್ತೀಚೆಗೆ (2018 ಮತ್ತು 2019ರಲ್ಲಿ) ಭೂಕಂಪಗಳು ತೀವ್ರವಾಗಿದ್ದು, ಇದಕ್ಕೆ ಇಲ್ಲಿಯ ಕಾಫಿ ತೋಟಗಳ ಭೂಮಾಲೀಕರುಗಳು ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕಾಫಿ ಬೆಳೆಯ ಬೆಲೆ ಬಿದ್ದು ಹೋದಕಾರಣ, ಕಾಫಿ ಬೆಳೆಯುವುದನ್ನು ನಿಲ್ಲಿಸಿ, ಆ ಪ್ರದೇಶವನ್ನು ರೆಸಾರ್ಟ್ ಗಳನ್ನಾಗಿ ಬಳಸಿರುವುದು ಕಾರಣ ಎಂದು ತಿಳಿಸಿದ್ದಾರೆ. ಇದರಿಂದಾಗಿ ವಾಹನಗಳ ದಟ್ಟಣೆ ಜಾಸ್ತಿಯಾಗಿರುವುದು ಈ ಪ್ರದೇಶದ ಸೂಕ್ಷ್ಮ ಪರಿಸರ ಸಮತೋಲನವನ್ನು ಕದಡಲು ಕಾರಣವಾಗಿದೆ ಎಂದು ಅವರು ವಾದ ಮಂಡಿಸಿದ್ದಾರೆ. ನ್ಯಾಯಮೂರ್ತಿ ಅಭಯ್ ಶ್ರೀನಿವಾಸ ಒಕ ಅವರು ಕೇಂದ್ರದ ಪರಿಸರ ಸಂರಕ್ಷಣೆ ಮತ್ತು ಅರಣ್ಯ ಖಾತೆ ಮಂತ್ರಿಗಳಿಗೆ ಮತ್ತು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಈ ಕುರಿತು ಅಧಿಸೂಚನೆ ನೀಡಲು ಆಜ್ಞಾಪಿಸಿದ್ದಾರೆ. ಈ ಕುರಿತು ಮುಂದಿನ ವಿಚಾರಣೆ ನವೆಂಬರ್ 28, 2019ಕ್ಕೆ ಮುಂದೂಡಲಾಗಿದೆ.

ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ಹೋರಾಟಗಳು ಇವುಗಳ ಮದ್ಯದ ಸಂಘರ್ಷ ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಮಾನವನ ಅಭಿವೃದ್ಧಿ ಮಂತ್ರದ ಎದುರು, ಯಂತ್ರ ನಾಗರೀಕತೆಯ ಎದುರು ಕೊನೆಗೂ ಸೋಲು ಕಾಣಬೇಕಾದದ್ದು ಅಮಾಯಕವಾದ, ನಿಸಹಾಯಕವಾದ ಪರಿಸರವೇ ಆಗಿರುತ್ತದೆ. 2010ರಲ್ಲಿ ಭಾರತೀಯ ರೈಲ್ವೆ ಸಚಿವಾಲಯ ಸದ್ಯ ಉಪಸ್ಥಿತವಿರುವ ಹೊಸಪೇಟೆ-ತಿನ್ಯೆ ಘಾಟ್-ವಾಸ್ಕೊ ರೈಲ್ವೆ ಮಾರ್ಗವನ್ನು ದ್ವಿಗುಣಗೊಳಿಸಲು ಒಪ್ಪಿಗೆ ನೀಡಿದ್ದು ತಿನ್ಯೆ ಘಾಟ್-ವಾಸ್ಕೊ ರೈಲ್ವೆ ಮಾರ್ಗದ ಮದ್ಯೆ ಹಲವು ಕಣಿವೆಗಳು ಮತ್ತು ನದಿಗಳು ಮತ್ತು ದುರ್ಗಮ ಜಠಿಲ ಕಾಡು ಪ್ರದೇಶಗಳು ಹಾದು ಹೋಗುತಲಿದ್ದು ಈ ಯೋಜನೆಯನ್ನು ಕೇದ್ರ ಅರಣ್ಯೆ ಇಲಾಖೆ ಮತ್ತು ಗೋವಾದ ಅರಣ್ಯೆ ಇಲಾಖೆ ಈ ಯೋಜನೆಗೆ ಒಪ್ಪಿಗೆಯನ್ನು ಸೂಚಿಸಿವೆ. ಆರಂಭದಲ್ಲಿ ಈ ಯೋಜನೆಗೆ ಗೋವಾ ಅರಣ್ಯೆ ಇಲಾಖೆ ವಿರೋದವನ್ನು ಸೂಚಿಸಿತ್ತು. ಈ ಯೋಜನೆ ಭಗವಾನ್ ಮಹಾವೀರ್ ಅಭಯಾರಣ್ಯೆ ಪ್ರದೇಶ ಮತ್ತು ಮಾಲೆಮ್ ರಾಷ್ಟ್ರೀಯ ವನ್ಯಧಾಮ ಪ್ರಧೇಶಗಳನ್ನು ಹಾದುಹೋಗಬೇಕಾಗಿದ್ದು ಈ ಯೋಜನೆ ಪಶ್ಚಿಮ ಘಟ್ಟಗಳ ಮಹಾನ್ ಇಳಿಜಾರನ್ನು ಘಾಸಿಗೊಳಿಸುತ್ತದೆ ಮತ್ತು ಆಮೂಲಕ ಭೂ ಕುಸಿತ ಮತ್ತು ಪ್ರಕೃತಿ ವಿಕೋಪಗಳಿಗೆ ಕಾರಣವಾಗುತ್ತದೆ ಎಂದು ವಿರೋಧಿಸಿದ್ದಿತು. 2020ರ ಏಪ್ರಿಲ್ ನಲ್ಲಿ ವಿರೋಧಿ ಭಣಗಳು ಈ ಯೋಜನೆಯ ವಿರುದ್ಧ "ಕೇದ್ರ ಸಬಲೀಕರಣ ಸಮಿತಿ" ಮುಂದೆ ಅರ್ಜಿ ಸಲ್ಲಿಸಿವೆ. ಈ ಅರ್ಜಿಯು ಬಾಂಬೆ ಉಚ್ಚ ನ್ಯಾಯಾಲಯದ ಮುಂದೆ ವಿಚಾರಣೆಗೆ ಬರಲಿದೆ. ಈ ಯೋಜನೆಯ ಮುಖ್ಯೆ ಉದ್ದೇಶ ಮರ್ಮ ಗೋವಾದ ಬಂದರಿನಿಂದ ಕರ್ನಾಟಕದ ಹೊಸಪೇಟೆಯ ವಿಜಯನಗರ ಉಕ್ಕಿನ ಕಾರ್ಖಾನೆಗೆ ಕಲ್ಲಿದ್ದಲನ್ನು ಸಾಗಿಸುವ ಉದ್ದೇಶವನ್ನು ಒಳಗೊಂಡಿದ್ದು ಪರಿಸರ ಮಾಲಿನ್ಯವನ್ನು ಉಂಟುಮಾಡುತ್ತದೆ ಎಂದು ವಿರೋಧಿ ಬಣಗಳು ದೂರಿವೆ.

## References


ಸಂಪಾದಕರು: ಪಂಜೆ ರಾಮರಾಯರು: "ಪಂಜೆಯವರ ಕೃತಿಗಳು" ಸಂಪುಟ:1, (ಪದ್ಯಗಳು), ಪ್ರಕಾಶಕರು: ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

"Un designates Western Ghats as world heritage site". Times of India, 2 July 2012. Retrived 2 July 2012.

"The Peninsula": Asia-Pacific Mountain Network. Archived from the original on 12 August 2007.

Vijayan V.S. "Research needs for the Western Ghats". Ashoka Trust for Research in Ecology and the Environment (ATREE). Retrieved 21, June 2007.

Myers, N., Mittermeier, R.A., Mittermeier, C.G., da Fonseca, G.A.B., Kent, J., Boidiversity hotspots for conservation priorities, Nature, Nature, 403 (2000) 853–858. https://doi.org/10.1038/35002501

"Un designates Western Ghats as world heritage site", Times of India 2 July 2012, Retrived 2 July 2012.

ಪೂರ್ಣಚಂದ್ರ ತೇಜಸ್ವಿ: "ವಿಸ್ಮಯ (1)", ಪ್ರ: ಪುಸ್ತಕ ಪ್ರಕಾಶನ, 91, 9ನೇ ಮೇನ್, ಸರಸ್ವತಿಪುರಂ, ಮೈಸೂರು-570009, ಪ್ರ.ಮು.1993, ಪುಟ: 67.

Ranjit Daniels, R.J., Biodiversity of the Western Ghats – An Overview, Wildlife. Institute of India.

ಎಸ್. ಎನ್. ರಾಮಸ್ವಾಮಿ: 'ಕರ್ನಾಟಕದ ಅರಣ್ಯ ವೃಕ್ಷಗಳು', ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು-570005, ಪ್ರ.ಮು.1969, ಪುಟ:5.

ಪೂರ್ಣಚಂದ್ರ ತೇಜಸ್ವಿ,ಪ್ರದೀಪ ಕೆಂಜಿಗೆ: "ವಿಸ್ಮಯ (1)", ಪ್ರ: ಪುಸ್ತಕ ಪ್ರಕಾಶನ, 91, 9ನೇ ಮೇನ್ ರಸ್ತೆ, ಸರಸ್ವತಿಪುರಂ, ಮೈಸೂರು-570009 ಪ್ರ.ಮು.1993, ಪುಟ: 70.

ಬಿ.ಜಿ.ಎಲ್.ಸ್ವಾಮಿ: "ಹಸಿರು ಹೊನ್ನು" ಪ್ರ.ಕಾವ್ಯಾಲಯ ಪ್ರಕಾಶನ, ಮೈಸೂರು: ಮೊ.ಮು.1976, ಪುಟ: 35.

"ಕರ್ನಾಟಕ ರಾಜ್ಯ ಕೋಶ-1", (ಸಸ್ಯ ಸಂಪುಟ): ಪ್ರೊ.ಸಿ.ಡಿ.ಪಾಟಿಲ್, ಡಾ.ಪಿ.ಕೆ. ರಾಜಗೋಪಾಲ್, ಡಾ.ಸೋಮಶೇಖರ್ ಎಸ್ ರುಳಿ, ಸುರೇಶ್ ವೆಂ ಕುಲಕರ್ಣಿ; ಪ್ರಕಾಶಕರು: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರ.ಮು.2001, ಪುಟ: ಪ್ರಸ್ತಾವನೆಯಲ್ಲಿ.

Rajeev, B.M.T., (2009) Glimpses of Indian Wildlife, (1st ed) Nekhara Prakashnana, Bangalore, India. Page No.3.

Ajith Kumar, Impact of rainforest fragmentation on small mammals and herpetofauna in the Western Ghats, South India, Sakim Centre for Ornithology and Natural History, Coimbatore, Archieved from the original on 19 December 2008.

ಶಿವಾನಂದ ಕಳವೆ: "ಪಶ್ಚಿಮಘಟ್ಟದಲ್ಲಿ ಮೋನೋಕಲ್ಚರ್ ಮಹಾಯಾನ", ಪ್ರ: ಶಿವರಾಮ ಕಾರಂತ ಅಧ್ಯಯನ ಕೇಂದ್ರ, ವಿವೇಕಾನಂದ ಕಾಲೇಜು, ಪುತ್ತೂರು-574203 (ದ.ಕನ್ನಡ), ಪ್ರ.ಮು. 2003, ಪುಟ: 8

## Acknowledgment

Nil

## Funding

This study was not funded by any grant

## Conflict of interest

The author declares that they have no actual or potential conflict of interest, including financial, personal, or other relationships with people or organizations that could have inappropriately influenced this work.

## About the License

© The author(s) 2021. The text of this article is open access and licensed under a Creative Commons Attribution 4.0 International License

## Cite this Article

T.M. Geethanjali, A Scientific study of Forests of the Western Ghats, Indian Journal of Multilingual Research and Development, Vol 2, Iss 3 (2021) 52-64. DOI: https://doi.org/10.34256/ijmrd2137